# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬

## ಪ್ರಥಮ ಎಂ.ಎ

## ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

### ಸ್ವಯಂ ಬೋಧನಾ ಸಾಮಗ್ರಿ




**ಕೋರ್ಸ್ V : ಅನ್ವಯಿಕ ಸಂವಹನ**

## Open - Distance Education: A Flexible Mode of Learning

Programmes offered by KSOU in the distance education and Online mode are custom-designed by a team of experts and specialists drawn from reputed Universities, industry and in-house faculty. The curriculum is sanctioned by experts and is adapted after an academic audit. The inbuilt flexibility enables to bring in changes quickly thus ensuring the system to be more dynamic and updated at all times.

Along with the students coming from formal stream who have passed the qualifying examinations, learners with no formal education who intend to pursue higher education are also encouraged to seek admissions at Undergraduate level. The programme delivery is essentially through multimedia package comprising printed self instructional material, personal contact programme, radio counseling and online support. KSOU offers a wide range of disciplines to choose from PG programmes and a varied combination of optional subjects to select from UG programmes. Students are allowed to pursue their studies in other universities and institutions, subject to certain regulations.

## KSOU Objectives

- To provide access and equity through open - flexible learning, which is relevant to learners, at their doorsteps.
- To create individualized virtual learning spaces to the needs of the new age learners and to enable universal knowledge resource sharing through innovative pedagogy.
- Better quality assurance and excellence through institutional collaboration and accessibility.
- To ensure institutional determination towards emancipatory learning.
- To create environment and knowledge media of first choice for learners and professionals worldwide.
- To keep pace with the new age requirement and encourage proactive convergence of media and technology for teaching and learning.
- To innovate, explore and practice new avenues in knowledge management and sharing for positive social intervention.
- To ensure sustained efforts to interpret and operationalise learner's needs to develop new skills through collaborative learning.

## Student Support Services of KSOU

For the benefit of over 60,000 students who enroll to various academic programmes every year, the University has established 21 regional centers and180 study centers across the state. These study centers act as extension centers of the University and provide a platform for the learners to interact with the counselors and experts. They provide academic counseling and liaison in the matters related to academics, examination and administration. Regional centers oversee the functioning of the study centers and act as a link between the university headquarter and the study centers.

Counseling and personal contact programme are an integral part of teaching and learning process. Counseling at KSOU is distinctly different from the conventional classroom teaching and is much an interactive session. These session are conducted at the convenience of the students. In certain specialised subjects, experts from the profession are invited for interaction. Gyanvani, the dedicated FM radio channel airs educational programmes on various subjects regularly to augment information needs. Radio counseling provide an opportunity for the students to interact live with the experts.

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ.ಎಂ.ಜಿ. ಕೃಷ್ಣನ್** — ಅಧ್ಯಕ್ಷರು
ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು

**ಪ್ರೊ.ಎಸ್. ಎನ್. ವಿಕ್ರಂರಾಜ್‌ಅರಸ್** — ಸಮಾವೇಶಕರು
ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು

**ಪ್ರೊ.ಜಿ.ವಿ. ವಿಲಾ ನಿಲಂ** — ವಿಷಯ ಪರಿಣಿತರು
ವಿಶ್ರಾಂತ ಕುಲಪತಿಗಳು, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂ, ಕೇರಳ

**ಪ್ರೊ.ಕೆ. ವಿ. ನಾಗರಾಜ್** — ವಿಷಯ ಪರಿಣಿತರು
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಅಸ್ಸಾಂಕೇಂದ್ರಿಯ ವಿಶ್ವವಿದ್ಯಾನಿಲಯ, ಸಿಲ್‌ಚಾರ್, ಅಸ್ಸಾಂ.

**ಡಾ. ತೇಜಸ್ವಿ ನವಿಲೂರ್** — ವಿಷಯ ಸಂಯೋಜಕರು ಮತ್ತು ಸಂಪಾದಕರು
ಮುಖ್ಯಸ್ಥರು,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮಅಧ್ಯಯನ ಮತ್ತು
ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.

## ಬರಹಗಾರರು — ಘಟಕಗಳು

| | | |
|---|---|---|
| ಬ್ಲಾಕ್1 | ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |
| ಬ್ಲಾಕ್2 | ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |
| ಬ್ಲಾಕ್3 | ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |
| ಬ್ಲಾಕ್4 | ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |

## ಪ್ರಕಾಶಕರು

**ಪ್ರೊ. ಪಿ. ಎಸ್. ನಾಯಕ್**
ಕುಲಸಚಿವರು, ಕರಾಮುವಿ, ಮೈಸೂರು 570 006.

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ.ಈ ಸ್ವಯಂ ಬೋಧನಾ ಸಾಮಗ್ರಿಯಯಾವುದೇ ಭಾಗವನ್ನುಯಾವುದೇರೀತಿಯಲ್ಲಿ ವಿಶ್ವವಿದ್ಯಾನಿಲಯದ ಲಿಖಿತಅನುಮತಿಇಲ್ಲದೆ ಪುನರ್ ಮುದ್ರಿಸುವುದನ್ನು ಹಾಗು ವಿತರಿಸುವುದನ್ನು ಪ್ರತಿಬಂಧಿಸಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡೀನ್ (ಶೈಕ್ಷಣಿಕ), ಮುಕ್ತಗಂಗೋತ್ರಿ, ಮೈಸೂರು 570006.**

ಮುಖಪುಟ ಪರಿಕಲ್ಪನೆ ಹಾಗು ವಿನ್ಯಾಸ: ಡಾ. ತೇಜಸ್ವಿ ನವಿಲೂರ್.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ
ಹಾಗು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು570006.

ಎಂಎ – ಎಂಸಿಜೆ
ಮೊದಲ ವರ್ಷ
ಪತ್ರಿಕೆ 5

## ಕೋರ್ಸ್ 5: ಅನ್ವಯಿಕ ಸಂವಹನ


ಬ್ಲಾಕ್1 ಅಭಿವೃದ್ಧಿಗಾಗಿ ಸಂವಹನ

ಘಟಕ 1.ಅಭಿವೃದ್ಧಿಯ ಪರಿಕಲ್ಪನೆ 01
2. ಅಭಿವೃದ್ಧಿಯ ಮಾದರಿಗಳು 13
3. ಮಾಧ್ಯಮಗಳು ಮತ್ತು ಸಾಮಾಜಿಕ ಪರಿವರ್ತನೆ 25
4. ಮಾಧ್ಯಮ ಮತ್ತು ಪರಿಸರ ಕಾಳಜಿ 39
5. ಭಾರತದಅಭಿವೃದ್ಧಿಗಾಗಿ ಸಂವಹನ 59

ಬ್ಲಾಕ್2 ಜಾಹೀರಾತು

ಘಟಕ 1.ಜಾಹೀರಾತು ಮತ್ತು ಸಮಾಜ 74
2. ಜಾಹೀರಾತಿನ ವಿಧಗಳು 83
3. ಜಾಹೀರಾತು ಸಂಸ್ಥೆಯ ವ್ಯವಸ್ಥೆ 94
4. ಜಾಹೀರಾತು ಪ್ರತಿ ಬರಹ 111
5. ಜಾಹೀರಾತುಆಂದೋಲನಗಳು ಮತ್ತು ಪರಿಣಾಮಗಳು 120

ಬ್ಲಾಕ್3 ಸಾರ್ವಜನಿಕ ಸಂಪರ್ಕ

ಘಟಕ 1. ಸಾರ್ವಜನಿಕ ಸಂಪರ್ಕ: ವ್ಯಾಖ್ಯಾನ, ಸ್ವರೂಪ ಮತ್ತು ವ್ಯಾಪ್ತಿ 131
2. ಸಾರ್ವಜನಿಕ ಸಂಪರ್ಕದ ವಿವಿಧ ಬಗೆಗಳು 143
3. ಸಾರ್ವಜನಿಕ ಸಂಪರ್ಕದ ಸಾಧನಗಳು 157
4. ಸಾಂಸ್ಥಿಕ ಸಂವಹನ 177
5. ಭಾರತದಲ್ಲಿ ಸಾರ್ವಜನಿಕ ಸಂಪರ್ಕ 192

ಬ್ಲಾಕ್4 ಹವ್ಯಾಸಿ ಪತ್ರಿಕೋದ್ಯಮ

ಘಟಕ 1. ಹವ್ಯಾಸಿ ಪತ್ರಿಕೋದ್ಯಮ: ಸ್ವರೂಪ ಹಾಗು ಅವಕಾಶಗಳು 204
2. ಹವ್ಯಾಸಿ ಬರಹದ ತಂತ್ರಗಳು 218
3. ಮಾಧ್ಯಮ ಪ್ರತಿಭಾನ್ವೇಷಣೆ 228
4. ನುಡಿಚಿತ್ರ ಸಿಂಡಿಕೇಟ್‌ಗಳು 239
5. ವಿಶಿಷ್ಟ ಬರಹಗಳು 250

# ಪರಿಚಯ

**ಪ್ರಿಯ ವಿದ್ಯಾರ್ಥಿ,**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವೃತ್ತಿಕ್ಷೇತ್ರಕ್ಕೆ ನಿಮಗೆ ಸ್ವಾಗತ.ಸಮಾಜ ವಿಜ್ಞಾನಗಳಲ್ಲಿ ಪತ್ರಿಕೋದ್ಯಮ ವಿಷಯವು ವೃತ್ತಿಪರವಾಗಿದ್ದು, ಈ ವಿಷಯದಲ್ಲಿ ಪದವಿ ಪಡೆದ ಅನೇಕ ಆಸಕ್ತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿದೆ.ಮಾಹಿತಿಯುಗದಲ್ಲಿ ತೆರೆದುಕೊಳ್ಳುತ್ತಿರುವ ಅವಕಾಶಗಳ ಪೈಕಿ ಬಹುತೇಕ ಅವಕಾಶಗಳು ನಿರ್ದಿಷ್ಟ ವೃತ್ತಿಕುಶಲತೆಯನ್ನು ಬಯಸುತ್ತವೆ.ಈ ನಿಟ್ಟಿನಲ್ಲಿಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ದೂರಶಿಕ್ಷಣ ಕ್ರಮಗಳು ಆಸಕ್ತರ ಬಳಿಗೆ ವಿಷಯ ಸಂಪನ್ಮೂಲಗಳನ್ನು ಒದಗಿಸುತ್ತಾಕೌಶಲ್ಯಪೂರ್ಣ ವಿದ್ಯಾರ್ಜನೆಗೆ ಪ್ರೋತ್ಸಾಹಿಸುತ್ತಿವೆ. ಪ್ರಸ್ತುತ ವೃತ್ತಿಅವಶ್ಯಕತೆಗೆಅನುಗುಣವಾಗಿಈ ಸ್ವಯಂ ಕಲಿಕಾ ಸಾಮಗ್ರಿಯನ್ನುರೂಪಿಸಲಾಗಿದೆ.

**ಕೋರ್ಸ್ 5: ಅನ್ವಯಿಕ ಸಂವಹನ**

ಜಾಗತೀಕರಣ, ಉದಾರೀಕರಣ ಹಾಗು ಖಾಸಗೀಕರಣದ ಪ್ರಭಾವದಿಂದ ಭಾರತದಲ್ಲಿಯಾವುದೇಉತ್ಪನ್ನಅಥವಾ ಸೇವೆಗೆ ಪ್ರತಿಸ್ಪರ್ಧಿಗಳು ಬಹಳಷ್ಟು, ಸೇವೆಗಳು ಹಾಗು ಉತ್ಪನ್ನಗಳು ತಮ್ಮಇರುವಿಕೆಯನ್ನು ತೋರ್ಪಡಿಸಿಕೊಂಡು ಇತರ ಸೇವೆಗಳು ಅಥವಾಉತ್ಪನ್ನಗಳನ್ನು ಹಿಮ್ಮೆಟ್ಟಿಸಲು ಮತ್ತು ಲಾಭಗಳಿಸಲು ಸದಾ ಶ್ರಮಿಸುತ್ತವೆ.ಈ ಸಮಸ್ಯೆಗಳಲ್ಲಿ ಸಾರ್ವಜನಿಕ ಸಂಪರ್ಕವುಒಂದು ಸಂವಹನ ತಂತ್ರವಾಗಿದ್ದುಇದುಇತರೆ ಸಂಘ-ಸಂಸ್ಥೆಗಳಲ್ಲಿಯೂ ಜನರೊಂದಿಗೇಉತ್ತಮ ಸಂಬಂಧವನ್ನುಕಲ್ಪಿಸುವಕೊಂಡಿಯಾಗಿದೆ. ಹಾಗಾಗಿ, ಖಾಸಗಿ ಕಂಪನಿಗಳು, ಸಂಘ-ಸಂಸ್ಥೆಗಳು, ಸರಕಾರ, ಪ್ರತಿಷ್ಠಿತ ವ್ಯಕ್ತಿಗಳು ಮತ್ತಿತರಯಾವುದೇ ವ್ಯವಹಾರಿಕಜನಸಮುದಾಯವು ಸಮಾಜದಲ್ಲಿತನ್ನಇರುವಿಕೆಯನ್ನು ಸದಾ ನೆನಪಿಸಬೇಕಾಗುತ್ತದೆ. ತಮ್ಮಉತ್ಪನ್ನಅಥವಾ ಸೇವೆಯಗುಣಮಟ್ಟ ಹಾಗು ಲಭ್ಯತೆಯ ಬಗ್ಗೆ ಜನರಲ್ಲಿ ಆಗಾಗ್ಗೆ ಮಾಹಿತಿಯನ್ನು ಒದಗಿಸಿ ತಂತಮ್ಮಜೀವಂತಿಕೆಯನ್ನು ಕಾಪಾಡಿಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸಂವಹನವು ಇತರ ಮಾಧ್ಯಮಗಳಂತೆ ಅತಿ ಹೆಚ್ಚು ಅನ್ವಯಿಕೆಯನ್ನು ಪಡೆಯುತ್ತದೆ.

ಒಂದು ಸಂಸ್ಥೆಯ ಪ್ರತಿಷ್ಠೆ, ಸೇವೆ ಹಾಗು ಉತ್ಪನ್ನಗಳು ಜನರ ಮನಸ್ಸಿನಲ್ಲಿ ಉಳಿದಷ್ಟು ಕಾಲ ಅದಕ್ಕೆ ಬೇಡಿಕೆ ಹಾಗು ಒಳ್ಳೆಯ ಬೆಲೆ ದೊರೆಯುತ್ತದೆ.ಜಾಹೀರಾತುಆಂದೋಲನಗಳು, ಪ್ರಚಾರ / ಯೋಜಿತ ಪ್ರಚಾರ, ಪತ್ರಿಕಾಗೋಷ್ಠಿಗಳು, ಸದನ ಪತ್ರಿಕೆಗಳು ಇನ್ನೂಇತರ ಸಂಪರ್ಕ ಸಾಧನಗಳನ್ನು ಕೂಡ ಬಳಸಿಕೊಂಡು ಸಂಸ್ಥೆಗಳು ಲವಲವಿಕೆಯಿಂದಜನರಜೀವನವನ್ನು ಸುಧಾರಿಸುವಸುಲಭವಾಗಿಸುವ ಉತ್ಪನ್ನಗಳು ಹಾಗು ಸೇವೆಗಳನ್ನು ನೀಡಬೇಕು. ಈ ಎಲ್ಲಾ ಕಾರ್ಯಗಳಿಗೆ ಸಂವಹನ ಜೀವಜಲದಂತೆ.

ಜಾಹೀರಾತು ಮತ್ತು ಸಾರ್ವಜನಿಕ ಸಂಪರ್ಕ ಕ್ಷೇತ್ರಗಳೂ ಪತ್ರಿಕೋದ್ಯಮಮತ್ತು ಸಮೂಹ ಸಂವಹನ ಪದವೀಧರರಿಗೆ ಉದ್ಯೋಗಾವಕಾಶಗಳನ್ನು ನೀಡುತ್ತಿವೆ.ಅನ್ವಯಿಕ ಸಂವಹನ ಕೋರ್ಸಿನಲ್ಲಿ ಅಭಿವೃದ್ಧಿಗಾಗಿ ಸಂವಹನ, ಜಾಹೀರಾತು, ಸಾರ್ವಜನಿಕ ಸಂಪರ್ಕ ಮತ್ತು ಹವ್ಯಾಸಿ ಪತ್ರಿಕೋದ್ಯಮದ ಬಗ್ಗೆ ತಿಳಿದುಕೊಳ್ಳುತ್ತೀರಿ.

ಶುಭ ಹಾರ್ದಿಕೆಗಳೊಂದಿಗೆ,

**ಮುಖ್ಯಸ್ಥರು**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
ಅಧ್ಯಯನ ಮತ್ತು ಸಂಶೋಧನಾ ವಿಭಾಗ,

ಕರಾಮುವಿ, ಮೈಸೂರು.

# ಘಟಕ 1 ಅಭಿವೃದ್ಧಿಯ ಪರಿಕಲ್ಪನೆ

ರಚನೆ


1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಅರ್ಥವಿವರಣೆ

1.3 ಚಾರಿತ್ರಿಕ ದೃಷ್ಟಿ

1.3.1 ಸಾಮಾಜಿಕ ವಿಭೇದೀಕರಣ

1.4 ಅಭಿವೃದ್ಧಿಯ ಮೂಲತತ್ವಗಳು

1.5 ವೈಯಕ್ತಿಕ ಮೌಲ್ಯಗಳು

1.6 ಮಾಪನ ಗುಣಕಗಳು

1.7 ಟೀಕೆಗಳು

1.8 ಅಭಿವೃದ್ಧಿಯ ಗುರಿಗಳು

1.9 ಸಾರಾಂಶ

1.10 ನಿಮ್ಮ ಪ್ರಗತಿ ಪರಿಶೀಲನೆ

1.11 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಹೊಸ ಸಂಪರ್ಕ ತಂತ್ರಜ್ಞಾನಗಳೂ ಸೇರಿದಂತೆ, ಸಮೂಹ ಸಂವಹನ ತತ್ವಗಳು ಮತ್ತು ನಿರ್ಮಾಣ ಕ್ರಿಯೆಯ ವಿಚಾರವಾಗಿ ನೀವು ಈಗಾಗಲೇ ತಿಳಿದುಕೊಂಡಿದ್ದೀರಿ. ಈ ಘಟಕದಲ್ಲಿ ರಾಷ್ಟ್ರೀಯ ಅಭಿವೃದ್ಧಿಯಂತಹ ಅತಿ ಪ್ರಮುಖವಾದ ಕ್ಷೇತ್ರದಲ್ಲಿ ಸಂವಹನ ತಂತ್ರಗಳ ಅನ್ವಯವನ್ನು ಕುರಿತು ಅಧ್ಯಯನ ಮಾಡೋಣ. ಅಭಿವೃದ್ಧಿಯನ್ನು ಒಂದು ಪ್ರಕ್ರಿಯೆಯಾಗಿ ಗುರುತಿಸಿ, ಆ ಪರಿಕಲ್ಪನೆಯ ಬಗ್ಗೆ ಈ ಘಟಕವು ಗಮನವನ್ನು ಕೇಂದ್ರೀಕರಿಸಲಿದೆ. ಈ ಘಟಕದ ನಿರ್ದೇಶಿತ ಗುರಿಗಳೆಂದರೆ:

* ಅಭಿವೃದ್ಧಿ ಪದದ ಅರ್ಥವಿವರಣೆ;
* ಅಭಿವೃದ್ಧಿಯ ಪ್ರಮುಖ ಪರಿಕಲ್ಪನೆಗಳ ಬಗ್ಗೆ ವಿಚಾರ ಮಾಡುವುದು, ಮತ್ತು
* ಅವುಗಳ ಗುಣ, ಅವಗುಣಗಳ ವಿಮರ್ಶೆ.

## 1.1 ಪ್ರಸ್ತಾವನೆ

ರಾಷ್ಟ್ರವೊಂದರ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳು ಮತ್ತು ಸಂವಹನ ಕ್ಷೇತ್ರದ ಪಾತ್ರ ಕುರಿತಂತೆ ಸಾಕಷ್ಟು ಚರ್ಚೆಗಳಾಗಿವೆ, ಸಂಶೋಧನೆಗಳೂ ನಡೆದಿವೆ. ದೇಶದ ಅಭಿವೃದ್ಧಿಗೆ ಸಂವಹನ ತಂತ್ರಗಳ ಅನ್ವಯ ಮಾಡುವ ಪ್ರಕ್ರಿಯೆಯನ್ನು ಅಭಿವೃದ್ಧಿ ಸಂವಹನ ಎಂದು ಗುರುತಿಸಲಾಗುತ್ತದೆ. ಇದಕ್ಕೆ ಸ್ಥೂಲ ತಾತ್ಪರ್ಯವೆಂದರೆ ಇದು "ಅಭಿವೃದ್ಧಿಗಾಗಿ ಸಂವಹನ". ವಿಲ್‌ಬರ್ ಶ್ರಾಮ್, ಡೇನಿಯಲ್ ಲರ್ನರ್, ಇ.ಎಂ.ರೋಜರ್ಸ್, ಮಾಜಿದ್ ಟೆಹರಾನಿಯನ್, ಜಾನ್ ಎ. ಲೆಂಟ್ ಮತ್ತಿತರ ವಿದ್ವಾಂಸರು ಈ 'ಅಭಿವೃದ್ಧಿ ಸಂವಹನ' ಕುರಿತ ಅಧ್ಯಯನದ ಉಗಮ ಮತ್ತು ಪ್ರವರ್ಧನೆಗೆ ತಮ್ಮ ಅತ್ಯಮೂಲ್ಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಅಭಿವೃದ್ಧಿ - ಈ ಪದದ ಅರ್ಥವೇನು? ಎಂಬುದನ್ನು ಮೊದಲು ತಿಳಿಯೋಣ. 'ಅಭಿವೃದ್ಧಿ'ಗೆ ಸರ್ವವ್ಯಾಪಕವಾದ ನಿಷ್ಕೃಷ್ಟಾರ್ಥವನ್ನು ನೀಡುವ ಯಾವುದೇ ಒಂದು ಅರ್ಥವಿವರಣೆ ಇಲ್ಲ. ಆದರೆ, ತಮ್ಮ ವೈಯಕ್ತಿಕ ಗ್ರಹಿಕೆ ಮತ್ತು ಅನುಭವಗಳ ಆಧಾರದ ಮೇಲೆ ಅನೇಕ ವಿಶೇಷಜ್ಞರು 'ಅಭಿವೃದ್ಧಿ'ಯನ್ನು ಅರ್ಥೈಸುವ ಪ್ರಯತ್ನವನ್ನು ಮಾಡಿದ್ದಾರೆ.

## 1.2 ಅರ್ಥವಿವರಣೆ

ಕ್ಯಾಪ್ಲೋವ್ ಮತ್ತು ಫಿನ್‌ಸ್ಟರ್‌ಬುಷ್ ಅವರ ಪ್ರಕಾರ,

"ಸಮಕಾಲೀನ ಸಮಾಜವು ಯಾವುದರಿಂದ ಹೆಚ್ಚು ಹೆಚ್ಚು ಸಂಕೀರ್ಣವಾದ ಸಂಸ್ಥೆಗಳು ಅನ್ವಯಿಸುವ, ಉತ್ತಮಗೊಳ್ಳುತ್ತಲೇ ಹೋಗುತ್ತಿರುವ ತಂತ್ರಜ್ಞಾನಗಳ ಬಳಕೆಯಿಂದ, ಸಾಮಾಜಿಕ ಪರಿಸರದ ಮೇಲೆ ತನ್ನ ನಿಯಂತ್ರಣವನ್ನು ಸುಧಾರಿಸಿಕೊಳ್ಳುವುದೋ ಅದೇ ಅಭಿವೃದ್ಧಿ".

ಇ.ಎಂ. ರೋಜರ್ಸ್ ಅಭಿವೃದ್ಧಿಯನ್ನು ಕುರಿತು ಈ ರೀತಿಯಾದ ಅರ್ಥವಿವರಣೆಯನ್ನು ನೀಡಿದ್ದಾರೆ:

"ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಕಲ್ಪನೆಗಳನ್ನು ಬಿತ್ತುವ ಮೂಲಕ ಹೆಚ್ಚು ವ್ಯಕ್ತಿಗತ ವರಮಾನವನ್ನು ತರುವ ಹಾಗೂ ಉತ್ತಮವಾದ, ಆಧುನಿಕ ಉತ್ಪಾದನಾ ವಿಧಾನಗಳು ಮತ್ತು ಸಾಮಾಜಿಕ ಸಂಘಟನೆಗಳ ಮೂಲಕ, ಸುಧಾರಿತ ಜೀವನ ಮಟ್ಟವನ್ನು ತರುವ ಸಾಮಾಜಿಕ ಪರಿವರ್ತನೆ".

ಅಭಿವೃದ್ಧಿ ವಿಷಯದ ಬಗ್ಗೆ ವಿಶೇಷವಾದ ಪ್ರಭುತ್ವವನ್ನು ಹೊಂದಿದ್ದ 'ಮೈರ್' ಅವರು ಇದನ್ನು ಹೀಗೆ ಅರ್ಥೈಸಿದ್ದಾರೆ. "ಬೆಳವಣಿಗೆ + ಬದಲಾವಣೆ; ಅರ್ಥವ್ಯವಸ್ಥೆಯು ಬೆಳೆಯುವ ಮತ್ತು ವಿಸ್ತಾರಗೊಳ್ಳುವ ಸರಳವಾದ ಆಗಲೀಕರಣದ ಕ್ರಿಯೆಯಲ್ಲಿ ಕಾಣದೆ ಹೋಗಬಹುದಾದ, ಆದರೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅತಿ ಅವಶ್ಯವಾದ ಗುಣಾತ್ಮಕ ಆಯಾಮಗಳು".

ಸಾಮಾನ್ಯವಾಗಿ ಬದಲಾವಣೆಯು ವ್ಯಕ್ತಿಯ ಮಟ್ಟದಲ್ಲಿ ಅಥವಾ ಸಮಾಜದ ಮಟ್ಟದಲ್ಲಿಯೂ ಆಗುತ್ತದೆ. ಸಮಾಜ ವ್ಯವಸ್ಥೆಯ ಮಟ್ಟದಲ್ಲಿ ಪರಿವರ್ತನೆಯಾದರೆ, ಅದನ್ನು ಅಭಿವೃದ್ಧಿ, ವಿಭೇದೀಕರಣ, ಸಮಗ್ರತೆ ಅಥವಾ ಅಳವಡಿಕೆ ಎಂಬುದಾಗಿ ಗುರುತಿಸಲಾಗುತ್ತದೆ. ಅಲ್ಲದೆ ಈ ಎರಡೂ ಹಂತಗಳ ಪರಿವರ್ತನೆಗಳು ಪರಸ್ಪರ ಪೂರಕವಾಗಿರುತ್ತವೆ. ವ್ಯಕ್ತಿಗತ ಬದಲಾವಣೆಗಳು ಸಮಾಜ ವ್ಯವಸ್ಥೆಯ ಪರಿವರ್ತನೆಗೆ ದಾರಿಮಾಡಿಕೊಡುತ್ತವೆ. ಅಂತೆಯೇ ಸಾಮಾಜಿಕ ವ್ಯವಸ್ಥೆಯಲ್ಲಿನ ಬದಲಾವಣೆ ಸಹ.

ಅಭಿವೃದ್ಧಿ ಪ್ರಕ್ರಿಯೆಯ ಹರಹು ಬಹಳ ವಿಸ್ತಾರವಾದುದು. ಏಕೆಂದರೆ, ಈ ಪ್ರಕ್ರಿಯೆಯೇ ಬಹಳ ವ್ಯಾಪಕವಾದದ್ದು. ಅಭಿವೃದ್ಧಿಯು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳೆಲ್ಲವನ್ನೂ ಒಳಗೊಳ್ಳುತ್ತದೆ. ಅದು ಕೇವಲ ಆದಾಯದ ಹೆಚ್ಚಳವನ್ನಾಗಲೀ, ತಂತ್ರಜ್ಞಾನದ ಬೆಳವಣಿಗೆಯಷ್ಟನ್ನೇ ಪರಿಗಣಿಸುವುದಿಲ್ಲ. ಒಂದು ರೀತಿಯಲ್ಲಿ ಇದು ಬಹು ಆಯಾಮಗಳುಳ್ಳ ಅಂತರ ವಿಭಾಗೀಯ ಬಹುಕ್ಷೇತ್ರ ವಿಷಯವೂ ಹೌದು. ಸಾಮಾಜಿಕ ಅಭಿವೃದ್ಧಿಯ ಪರಿಕಲ್ಪನೆ ಬಹಳ ವಿಸ್ತಾರವಾದುದು. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದರ ಚಾರಿತ್ರಿಕ ಹಿನ್ನೆಲೆಯನ್ನೂ ಅರಿಯಬೇಕಾಗುತ್ತದೆ. ಏಕೆಂದರೆ, ಸಮಾಜದ ಅಧ್ಯಯನ ಮತ್ತು ಅದರ ಇತಿಹಾಸಗಳನ್ನು ಬೇರೆ ಬೇರೆಯಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯ ವಿಸ್ತೃತ ಪಟಲದಲ್ಲಿ ಜನತೆಯ ಭೌತಿಕ ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿಷಯಗಳೆಲ್ಲವೂ ಅಡಕವಾಗುತ್ತವೆ.

## 1.3 ಚಾರಿತ್ರಿಕ ದೃಷ್ಟಿ

ಅಭಿವೃದ್ಧಿಯ ಚಾರಿತ್ರಿಕ ದೃಷ್ಟಿಯನ್ನು ಈಗ ಸ್ಥೂಲವಾಗಿ ಪರಿಶೀಲಿಸೋಣ. ಅಭಿವೃದ್ಧಿಯ ಎಲ್ಲ ಮಾನವ ಯತ್ನಗಳೂ ಸುಖಸಾಧನಗಳನ್ನು ಕೊಳ್ಳುವುದರಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತವೆ. ನೈಸರ್ಗಿಕ ಸಂಪನ್ಮೂಲಗಳನ್ನು ದೊಡ್ಡ ಪ್ರಮಾಣದ ಉತ್ಪಾದನೆ ಮತ್ತು ವಿತರಣೆಗೆ ಬಳಸುವ ಪ್ರೇರಣೆಯ ಫಲವೇ ಕೈಗಾರಿಕಾ ಕ್ರಾಂತಿ. ರಾಜಕೀಯ - ಆರ್ಥಿಕ ತತ್ವೋದ್ದೇಶಗಳೂ ಸಹ ಇದರೊಂದಿಗೇ ಮೂಡಿಬಂದಂತಹವು. ಕೃಷಿ ಆಧಾರಿತ ದೇಶಗಳಾಗಿದ್ದು, ನಂತರ ಆಧುನಿಕವಾದ, ಸಾಮಾಜಿಕವಾಗಿ ಮುಂದುವರೆದ ರಾಷ್ಟ್ರಗಳಾಗಿ ಬಹುಬೇಗ ಬದಲಾದವು. ಈ ಪರಿವರ್ತನೆಯು, ವಿವಿಧ ದೇಶಗಳನ್ನು ಇದೇ ಆಧಾರದ ಮೇಲೆ ವರ್ಗೀಕರಿಸಲ್ಪಟ್ಟು ಹೊಸ ರಾಷ್ಟ್ರಪಂಗಡಗಳನ್ನು ಸೃಷ್ಟಿ ಮಾಡಿತು.

ಮೊದಲನೆ ವಿಶ್ವದ ರಾಷ್ಟ್ರಗಳೆಂದು ಕರೆಯಲ್ಪಡುವ ವರ್ಗದಲ್ಲಿ ಸೇರಿರುವ ರಾಷ್ಟ್ರಗಳೆಂದರೆ, ಬಹಳ ಮುಂದುವರೆದಿರುವ, ಕೈಗಾರಿಕೀಕರಣಗೊಂಡಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳು, ಜಪಾನ್, ಬ್ರಿಟನ್, ಫ್ರಾನ್ಸ್, ಕೆನಡಾ ಮತ್ತು ಇಟಲಿ. ಪಶ್ಚಿಮ ಯೂರೋಪಿನ ಎಲ್ಲಾ ರಾಷ್ಟ್ರಗಳೂ ಈ ಗುಂಪಿನಲ್ಲಿಯೇ ಸೇರುತ್ತವೆ. ರಷ್ಯಾ ಮತ್ತು ಪೂರ್ವ ಯೂರೋಪ್‌ನ ಇತರ ಕೆಲವು ರಾಷ್ಟ್ರಗಳು ದ್ವಿತೀಯ ವಿಶ್ವದ ಪ್ರಾತಿನಿಧಿಕ ರಾಷ್ಟ್ರಗಳು. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ತೃತೀಯ ವಿಶ್ವದ ರಾಷ್ಟ್ರಗಳೆಂದು ಗುರುತಿಸಲಾಗುತ್ತದೆ. ಪ್ರಪಂಚದ ಮೂರನೆಯ ಎರಡು ಭಾಗದಷ್ಟು ಸಂಖ್ಯೆಯ ಜನರು ಬದುಕುತ್ತಿರುವುದು ಈ ಮೂರನೇ ವಿಶ್ವದ ರಾಷ್ಟ್ರಗಳಲ್ಲೇ. ವಾಸ್ತವವಾಗಿ, ಎರಡನೇ ಮಹಾಯುದ್ಧದ ನಂತರವೇ 'ಅಭಿವೃದ್ಧಿ'ಯ ಕಲ್ಪನೆಗೆ ಹೆಚ್ಚು ಉತ್ತೇಜನ ದೊರಕಿದ್ದು,

ಅಮೇರಿಕದ ಅಧ್ಯಕ್ಷರಾಗಿದ್ದ ಹ್ಯಾರಿ ಎಸ್. ಟ್ರೂಮನ್ ಅವರು, 1949ರಲ್ಲಿ, ಜಾಗತಿಕ ಶಾಂತಿ, ಸಮೃದ್ಧಿಗಾಗಿ ಮತ್ತು ಬಡತನ ನಿವಾರಣೆಗಾಗಿ ಹೆಚ್ಚು ಉತ್ಪಾದನೆಯ ಅವಶ್ಯಕತೆಯನ್ನು ಕುರಿತು ತಮ್ಮ 'ಪಾಯಿಂಟ್ ಫೋರ್' ಕಾರ್ಯಯೋಜನೆಯನ್ನು ಪ್ರಸ್ತಾಪಿಸಿದರು. ಬಡತನದ ಎಲ್ಲಾ ತೊಂದರೆಗಳಿಗೂ ಕೈಗಾರಿಕೀಕರಣವೇ ಉತ್ತರ ಎಂದು ಅವರು ಭಾವಿಸಿಕೊಂಡಿದ್ದರಿಂದ ಇದೊಂದು ದೀರ್ಘಕಾಲಿಕ ಪರಿಹಾರ ಎಂಬುದು ಅವರ ಹೇಳಿಕೆಯಾಗಿತ್ತು. ಅಂದಿನ ಧ್ಯೇಯವಾಕ್ಯವೆಂದರೆ 'ಕೈಗಾರಿಕೀಕರಣ ಇಲ್ಲವೆ ಸರ್ವನಾಶ' ಎಂಬುದಾಗಿತ್ತು.

ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳನ್ನು ವಶಪಡಿಸಿಕೊಂಡ ಮೂಲ ಉದ್ದೇಶವೇ ಯೂರೋಪ್‌ನ ಕೈಗಾರಿಕಾ ಸ್ಥಾವರಗಳಿಗೆ ಕಚ್ಚಾವಸ್ತುಗಳ ಪೂರೈಕೆ ಮಾಡುವುದು ಎಂದು ವಸಾಹತುಶಾಹಿಯ ಇತಿಹಾಸವೇ ಹೇಳುತ್ತದೆ. ಎರಡನೇ ವಿಶ್ವ ಮಹಾಯುದ್ಧ ಮುಗಿದನಂತರ, ಈ ವಸಾಹತುಗಳು ಸ್ವಾತಂತ್ರ್ಯಕ್ಕಾಗಿ ಬಿರುಸಿನ ಹೋರಾಟ ನಡೆಸಿದವು. ರಾಜಕೀಯ ಸ್ವಾತಂತ್ರ್ಯವು ಅಲ್ಲಿನ ಬೃಹತ್ ಜನಸಂಖ್ಯೆಗೆ ಆರ್ಥಿಕ ಸ್ವಾಯತ್ತತೆಯನ್ನೂ, ಸಮಾನತೆಯನ್ನೂ ನೀಡಬೇಕಾದ ಅನಿವಾರ್ಯತೆಯನ್ನು ತಂದೊಡ್ಡಿತು. ಅಭಿವೃದ್ಧಿಯ ವೇಗ ಮತ್ತು ಮಟ್ಟವನ್ನು ಆಧರಿಸಿ, ಪ್ರಪಂಚದ ದೇಶಗಳನ್ನು ಇಂದು ಮೂರು ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಕೈಗಾರಿಕೀಕರಣಗೊಂಡ ಉತ್ತರದ ರಾಷ್ಟ್ರಗಳು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸಿಕೊಂಡಿವೆ. ಹೀಗೆ, ರಾಷ್ಟ್ರಗಳು [illegible]ರೀಕರಣಗೊಂಡಂತೆ 'ಅಭಿವೃದ್ಧಿ'ಯ ಪರಿಕಲ್ಪನೆ ಮೂಡಿಬಂತು.

ಚಾರಿತ್ರಿಕವಾಗಿ ನೋಡುವುದಾದರೆ, ಹತ್ತೊಂಬತ್ತನೆಯ ಶತಮಾನದಲ್ಲಿ ಯೂರೋಪ್ ಮತ್ತು ಉತ್ತರ ಅಮೇರಿಕಾ ಸಮಾಜಗಳು ಕೃಷಿಯಿಂದ ಕೈಗಾರಿಕೀಕರಣಗೊಂಡದ್ದೇ ಪರಿವರ್ತನೆಯ ಪ್ರಮುಖ ಬಿಂದು. ಮಾರ್ಗನ್, ಕಾಮ್ಟೆ ಮತ್ತು ಸ್ಪೆನ್ಸರ್ ಮುಂತಾದ ಸಮಾಜಶಾಸ್ತ್ರಜ್ಞರು ಮಾನವ ಸಮಾಜಗಳ ಅಭಿವೃದ್ಧಿಯನ್ನು ಜೀವಶಾಸ್ತ್ರದಲ್ಲಿ ಹೇಳುವಂತಹ ಜೀವವಿಕಾಸವಾದದೊಂದಿಗೆ ಹೋಲಿಕೆ ಮಾಡುತ್ತಾರೆ. ಇದನ್ನು 'ಸಮಾಜ ವಿಕಾಸವಾದ' ಎಂದು ಕರೆಯಲಾಗುತ್ತದೆ. ಇದರ ಪ್ರಕಾರ, ಮಾನವ ಸಮಾಜಗಳು ಏಕಮುಖಿ ಅಭಿವೃದ್ಧಿ ಕಂಡು ಎಲ್ಲೆಡೆ ಒಂದೇ ರೀತಿಯಾಗಿ ವಿಕಸನಗೊಂಡವು. ಈ ಎಲ್ಲ ವಿದ್ವಾಂಸರೂ ಚಾರ್ಲ್ಸ್ ಡಾರ್ವಿನ್ನನ 'Origin of Species' (1859) ನಿಂದ ಪ್ರಭಾವಿತರಾಗಿದ್ದರು.

ಡಾರ್ವಿನ್ನನ ಪ್ರಕಾರ ಎಲ್ಲ ಜೀವಿಗಳೂ ಸರಳವಾದ ರೂಪಗಳಿಂದ ಪ್ರಾರಂಭಗೊಂಡು, ಸಂಕೀರ್ಣರೂಪಗಳಾಗಿ ಅಭಿವೃದ್ಧಿ ಹೊಂದಿದವು. ಪ್ರಾರಂಭದ ಸಮಾಜಶಾಸ್ತ್ರ ವಾದಗಳು ಮಾನವ ಸಮಾಜಗಳಿಗೂ ಕೂಡ ಈ ವಾದವನ್ನೇ ಅನ್ವಯಿಸಿಕೊಂಡವು. ಈ ವಾದವನ್ನು ಸಮರ್ಥಿಸುತ್ತಿದ್ದ ಹರ್ಬರ್ಟ್ ಸ್ಪೆನ್ಸರ್ ಮತ್ತು ಸಮ್ನರ್ ಅವರು, ಪಾಶ್ಚಿಮಾತ್ಯ ಸಮಾಜಗಳೇ ಪ್ರಪಂಚದ ಉಳಿದ ಎಲ್ಲಾ ಸಮಾಜಗಳಿಗಿಂತ ಉತ್ಕೃಷ್ಟ ಎಂದು ಸಾರಿದರು. ಈ ಶಾಖೆಯ ವಾದವನ್ನು 'ಸಾಮಾಜಿಕ ಡಾರ್ವಿನಸಂ' ಎಂದು ಕರೆಯಲಾಗುತ್ತದೆ. ಅಭಿವೃದ್ಧಿಯ ಅರ್ಥವನ್ನು ವ್ಯಾಖ್ಯಾನ ಮಾಡಿದ ಹಿಂದಿನ ಎಲ್ಲಾ ವಾದಗಳೂ, ಅಭಿವೃದ್ಧಿಯು ಯಾವಾಗಲೂ ಒಂದು ಅಂಶ; ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಕಲಹದಿಂದಲೇ ಇದು ಆಗುತ್ತದೆ ಎಂದು ಘಂಟಾಘೋಷವಾಗಿ ಸಾರಿದ್ದವು.

ಈ ವಾದಗಳು ಎರಡು ವಿರುದ್ಧ ದಿಕ್ಕಿನ ಕಲ್ಪನೆ ಹಾಗು ಗುಣಗಳನ್ನು ಹೊಂದಿದ್ದರಿಂದ, ಅವುಗಳನ್ನು, 'ದ್ವಿಧ್ರುವೀಯ ವಾದಗಳು' ಎಂದು ಕರೆಯಲಾಗುತ್ತದೆ. ಸಾಂಪ್ರದಾಯಿಕ ಸಮಾಜಗಳು ಆಧುನಿಕ ಸಮಾಜಗಳಾಗಿ ಆಗುವ ಪರಿವರ್ತನೆಯೇ ಅಭಿವೃದ್ಧಿ ಎನ್ನುವ ಸರಳಸೂತ್ರ ಈ ವಿಚಾರಕರುಗಳದ್ದಾಗಿತ್ತು. ಅವರ ಪ್ರಕಾರ, ಸಾಂಪ್ರದಾಯಿಕ ಸಮಾಜಗಳೆಂದರೆ, ಗ್ರಾಮೀಣ, ಚಿಕ್ಕ, ವ್ಯಕ್ತಿ ಮಟ್ಟದಲ್ಲಿ ಮತ್ತು ಸಂಬಂಧಿಕರ ನಡುವೆ ಗಾಢವಾದ ಬಾಂಧವ್ಯ ಇರುವಂತಹವು. ಅದೇ ರೀತಿ ಆಧುನೀಕರಣವೆಂದರೆ ನಗರೀಕರಣ, ವ್ಯಕ್ತಿ ಸಂಬಂಧ ಇಲ್ಲದಿರುವಿಕೆ, ವಿಭೇದೀಕರಣಕೊಂಡ ಸ್ವರೂಪ ಮತ್ತು ವ್ಯಕ್ತಿ ವಿಶಿಷ್ಟ ಕಾರ್ಯೋದ್ಯೋಗಗಳು. ಸಾಮಾಜಿಕ ಬದಲಾವಣೆಯಲ್ಲಿ ವಸಾಹತುಗಳ ಪಾತ್ರವನ್ನು ಪಾಶ್ಚಿಮಾತ್ಯ ಸಮಾಜಗಳು ಪರಿಗಣಿಸಲಿಲ್ಲ.

## 1.3.1 ಸಾಮಾಜಿಕ ವಿಭೇದೀಕರಣ

ಅಭಿವೃದ್ಧಿಗೆ ಸಂಬಂಧಿಸಿದ ಸಾಮಾಜಿಕ ವಿಭೇದೀಕರಣದ ವಿಚಾರವು ವಿಕಾಸವಾದದ ವಿಸ್ತರಣೆಯೇ. ಇದರ ಪ್ರಕಾರ ಸಾಮಾಜಿಕ ಸಂಸ್ಥೆಗಳಲ್ಲಿ ಹೆಚ್ಚು ಹೆಚ್ಚು ವಿಭೇದೀಕರಣ ಉಂಟಾಗುವುದರಿಂದ ಆಧುನೀಕರಣ ಸಾಧ್ಯವಾಗುತ್ತದೆ. ಸರಳ ಸಮಾಜವೊಂದರಲ್ಲಿ ಒಂದೇ ಒಂದು ಸಂಸ್ಥೆಯಿದ್ದು, ಹಲವಾರು ಕಾರ್ಯಗಳನ್ನು ಅದೇ ನಿರ್ವಹಿಸುತ್ತಿರಬಹುದು. ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಂದು ತುದಿಯ ಆಧುನಿಕ ಸಮಾಜದಲ್ಲಿ ಹಲವಾರು ಸಂಘಗಳಿದ್ದು ಅವು ತಮ್ಮದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತವೆ. ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗುವ ವಿಕಾಸವಾದದ ಸಾರ್ವತ್ರಿಕ ಸೂತ್ರಗಳು ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಪರ್ಸನ್ ನೀಡಿದ ಕಾಣಿಕೆಗಳು. ಅವುಗಳೆಂದರೆ: ಹಣ, ಮಾರುಕಟ್ಟೆ, ಅಧಿಕಾರಶಾಹಿ, ಕಾನೂನಿನ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವ ಆಡಳಿತ ರೀತಿ. ಅವರ ಪ್ರಕಾರ, ಈ ಸಾರ್ವತ್ರಿಕ ಸೂತ್ರಗಳೇ ಪಾಶ್ಚಿಮಾತ್ಯ ಸಮಾಜದ ಆಧುನೀಕರಣಕ್ಕೆ ಕಾರಣೀಭೂತವಾದವು. ಅರ್ಥಾತ್, ಅಭಿವೃದ್ಧಿಗೆ ಸಂಬಂಧಿಸಿದಂತೆ ತೃತೀಯ ವಿಶ್ವದ ರಾಷ್ಟ್ರಗಳಿಗೆ ಪಾಶ್ಚಿಮಾತ್ಯ ದೇಶಗಳೇ ಅತ್ಯುತ್ತಮ ಮಾದರಿಗಳು.

## 1.4 ಅಭಿವೃದ್ಧಿಯ ಮೂಲತತ್ವಗಳು

### 1.4.1 ಅಕ್ಷರತೆ

ಯಾವುದೇ ರಾಷ್ಟ್ರ ನಿಜ ಅರ್ಥದಲ್ಲಿ ಅಭಿವೃದ್ಧಿಯಾಗಬೇಕಾದರೆ, ಅಕ್ಷರತೆ ಬಹು ಮುಖ್ಯ ಪಾತ್ರವಹಿಸುತ್ತದೆ. ಅಕ್ಷರಸ್ಥರಾದ ಜನ ತೀರ್ಮಾನಗಳನ್ನು ತೆಗೆದುಕೊಳ್ಳುವ ಕ್ರಿಯೆಯಲ್ಲಿ ಭಾಗಿಗಳಾಗುತ್ತಾರೆ. ಬದಲಾವಣೆ ಮತ್ತು ಅದರಿಂದ ಉಂಟಾಗುವ ಅಭಿವೃದ್ಧಿಯ ಬಗ್ಗೆ ಪ್ರೇರಿತರಾಗುತ್ತಾರೆ. ಸಮೂಹ ಮಾಧ್ಯಮಗಳಿಗೆ, ಅದರಲ್ಲೂ ಮುಖ್ಯವಾಗಿ ಮುದ್ರಣ ಮಾಧ್ಯಮಕ್ಕೆ ಅವರುಗಳು ತೆರೆದುಕೊಳ್ಳಲು ಅಕ್ಷರತೆ ಅವಕಾಶ ನೀಡುತ್ತದೆ. ತಮ್ಮ ಸಂದೇಶದ ವಿವಿಧ ಅಂಶಗಳನ್ನು ನಿಯಂತ್ರಿಸಲು ಮತ್ತು ಮುದ್ರಣ ಮಾಧ್ಯಮದಿಂದ ಅವಶ್ಯವಾದ ಹಿನ್ನೆಲೆ ಮಾಹಿತಿ ಪಡೆಯಲು ಇದು ಸಹಾಯ ಮಾಡುತ್ತದೆ.

### 1.4.2 ಸಮೂಹ ಮಾಧ್ಯಮಗಳಿಗೆ ತೆರೆದುಕೊಳ್ಳುವಿಕೆ

ಅಕ್ಷರತೆಯೊಡನೆ ಪ್ರಜೆಗಳು ಸಮೂಹ ಮಾಧ್ಯಮಗಳಾದ ವೃತ್ತಪತ್ರಿಕೆಗಳು, ನಿಯತಕಾಲಿಕಗಳು, ರೇಡಿಯೋ, ಟೆಲಿವಿಷನ್ ಮತ್ತು ಚಲನಚಿತ್ರಗಳಿಗೆ ತೆರೆದುಕೊಳ್ಳುವ ಪ್ರಕ್ರಿಯೆ ರಾಷ್ಟ್ರವೊಂದರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ನಾವೀನ್ಯತೆಗಳು, ಆಧುನೀಕರಣ, ರಾಜಕೀಯ ಜ್ಞಾನ ಕುರಿತ ಸಂದೇಶಗಳು ಸಮೂಹ ಮಾಧ್ಯಮಗಳ ಮೂಲಕ ಪ್ರಸರಣಗೊಳ್ಳುತ್ತವೆ. ಜನರು ತಮ್ಮ ಜ್ಞಾನಾರ್ಜನೆಗೆ ಹಾಗು ಮಾಹಿತಿ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಇದು ಸಹಾಯ ಮಾಡುತ್ತದೆ.

### 1.4.3 ಉದಾರತೆ

ಇ.ಎಂ. ರೋಜರ್ಸ್ ಗುರುತಿಸಿರುವಂತೆ, 'ಉದಾರತೆ'ಯು ಅಭಿವೃದ್ಧಿಯ ಒಂದು ಅವಶ್ಯಕ ಮೂಲ ವಸ್ತುವಾಗಿದ್ದು, 'ವ್ಯಕ್ತಿಯೊಬ್ಬ ತನ್ನ ಹೊರಗಿನ ಸಾಮಾಜಿಕ ವ್ಯವಸ್ಥೆಗೆ ಅಭಿಮುಖವಾಗಿರುವ ಮಟ್ಟ' ಉದಾರತೆಯನ್ನು ನಿರ್ಧರಿಸುತ್ತದೆ. ವ್ಯಕ್ತಿಯೊಬ್ಬನಿಗೆ ತನ್ನ ಸಮಾಜದ ಹೊರಗೆ ಶಿಫಾರಸು ಮಾಡುವ ಗುಂಪುಗಳಿದ್ದರೆ, ಆತ 'ಉದಾರವಾದಿ' ಆಗುತ್ತಾನೆ. ಹಳ್ಳಿಗನೊಬ್ಬ, ದೊಡ್ಡ ನಗರ ಅಥವಾ ಪಟ್ಟಣಗಳಿಗೆ ಹಲವಾರು ಬಾರಿ ಪ್ರಯಾಣ ಮಾಡುತ್ತಿದ್ದರೆ ಕೂಡ ಹೀಗೆ ಆಗಬಹುದು. ಇದು ಅವನನ್ನು ಪರಿವರ್ತನೆ ಮತ್ತು ಆಧುನಿಕತೆಗೆ ತೆರೆದಿಡುತ್ತದೆ. ಅತಿಯಾದ ಕಟ್ಟುಪಾಡುಗಳು ವ್ಯಕ್ತಿಯೊಬ್ಬನನ್ನು ಸುಲಭವಾಗಿ ಮಾಧ್ಯಮಗಳಿಗೆ ತೆರೆದುಕೊಳ್ಳಲು ಅನುವು ಮಾಡುವುದಿಲ್ಲ.

## 1.4.4 ಅನುಭೂತಿ

ಬೇರೆಯವರು ಇರುವ ಸಂದರ್ಭ ಸನ್ನಿವೇಶಗಳಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುವುದೇ ಅನುಭೂತಿ. ಹೊರ ಪ್ರಪಂಚದೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದರಿಂದ ಇದನ್ನು ಪಡೆಯಬಹುದು. ಅನುಭೂತಿ ಇಲ್ಲದಿದ್ದರೆ ವ್ಯಕ್ತಿ ಬದಲಾವಣೆಯನ್ನು ವಿರೋಧಿಸುತ್ತಾನೆ ಮತ್ತು ಅಭಿವೃದ್ಧಿಯ ಹಾದಿಯಲ್ಲಿ ಅಡಚಣೆಯಾಗುತ್ತಾನೆ. ಸ್ಪಷ್ಟ ನಿಲುವು ಇಲ್ಲದಿರುವುದು ಅಭಿವೃದ್ಧಿಗೆ ತೊಡಕು ಎಂಬುದನ್ನು ಬಹಳಷ್ಟು ಸಾರಿ ಗುರುತಿಸಲಾಗುತ್ತದೆ.

## 1.4.5 ಬಯಕೆಗಳು

ವ್ಯಕ್ತಿಗಳಿಗೆ ಬಯಕೆಗಳಿದ್ದಾಗ ಮಾತ್ರ ಅಭಿವೃದ್ಧಿಯಾಗುವುದು ಸಾಧ್ಯ. ಹೊರಪ್ರಪಂಚದೊಂದಿಗೆ ಇರುವ ಸಂಪರ್ಕವು ಬಯಕೆಗಳು ಹೆಚ್ಚುವಂತಹ ಪ್ರೇರಣೆಗಳನ್ನು ನೀಡುತ್ತವೆ. ಬಯಕೆಗಳು, ಸಾಮಾನ್ಯವಾಗಿ ಹೇಳಲಾಗುವ ಹೆಚ್ಚುತ್ತಿರುವ 'ಬಯಕೆಗಳ ಕ್ರಾಂತಿ' ಈಡೇರದೆ ಹೋದರೆ, 'ಹತಾಶೆಗಳ ಕ್ರಾಂತಿ'ಗೂ ಎಡೆಮಾಡಿಕೊಡಬಹುದು.

## 1.4.6 ನವೀನತೆ

ರೋಜರ್ಸ್ ಅವರ ಪ್ರಕಾರ ನವೀನತೆ ಎಂದರೆ, ವ್ಯಕ್ತಿಯು ಸಮಾಜದ ಇತರರು ಒಪ್ಪಿಕೊಳ್ಳುವ ಮೊದಲೇ ನಾವೀನ್ಯತೆಗಳನ್ನು ಒಪ್ಪಿಕೊಳ್ಳುವ ಮತ್ತು ಅವುಗಳಿಗೆ ಒಗ್ಗಿಕೊಳ್ಳುವ ವೇಗ. ಇದು ವ್ಯಕ್ತಿಯ ಹಾಗೂ ಸಾಮಾಜಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುತ್ತದೆ. ಈ ರೀತಿಯ ನವೀನತೆಯನ್ನು ಒಪ್ಪಿಕೊಳ್ಳುವ ಗುಣ ವ್ಯಕ್ತಿಯೊಬ್ಬನನ್ನು ಅಭಿಪ್ರಾಯ ನೇತಾರರನ್ನಾಗಿಯೂ ಮಾಡಬಹುದು.

## 1.4.7 ರಾಜಕೀಯ ಜ್ಞಾನ

ರಾಷ್ಟ್ರವೊಂದರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯು ಅಲ್ಲಿಯ ರಾಜಕೀಯ ಸಂಸ್ಥೆಗಳನ್ನು ಅವಲಂಬಿಸಿದೆ. ರಾಜಕೀಯ ತೀರ್ಮಾನಗಳಲ್ಲಿ ಹೆಚ್ಚು ಹೆಚ್ಚು ಜನರು ಭಾಗಿಯಾಗುವುದರಿಂದ ಅಭಿವೃದ್ಧಿಯ ವೇಗ ವರ್ಧಿಸುತ್ತದೆ. ಇದಕ್ಕೆ ರಾಜಕೀಯ ಸಂಸ್ಥೆಗಳ ಜ್ಞಾನ ಅತ್ಯಗತ್ಯ. ರಾಜಕೀಯ ಪ್ರಕ್ರಿಯೆ ಜನರಿಗೆ ಪ್ರಶ್ನಿಸುವುದನ್ನು ಕಲಿಸುತ್ತದೆ. ಜನರ ಒಟ್ಟಾಭಿಪ್ರಾಯಕ್ಕೆ ಮನ್ನಣೆ ಸಿಕ್ಕಾಗ ಅಭಿವೃದ್ಧಿ ಸುಲಲಿತ.

## 1.5 ವೈಯಕ್ತಿಕ ಮೌಲ್ಯಗಳು

ಸಾಮಾಜಿಕ ಸ್ವರೂಪ ಮತ್ತು ವಿಭೇದೀಕರಣಕ್ಕೆ ಬದಲಾಗಿ, ಇತರೆ ಕೆಲವು ವಿದ್ವಾಂಸರು, ಅಭಿವೃದ್ಧಿಯನ್ನು ವ್ಯಕ್ತಿಯ ವೈಯಕ್ತಿಕ ಮೌಲ್ಯಗಳು ಮತ್ತು ಮನೋವೃತ್ತಿಗಳಿಗೆ ಜೋಡಿಸುತ್ತಾರೆ. ಅವರುಗಳಲ್ಲಿ ಒಬ್ಬನಾದ ಡೇವಿಡ್ ಮ್ಯಾಕ್‌ಲೆಲ್ಯಾಂಡ್ (1966), ಜನರ ಪ್ರಗತಿಶೀಲ ಮನೋವೃತ್ತಿಗೆ ಒಂದು ಬೌದ್ಧಿಕ ವೈರಸ್ ಕಾರಣ-ಎಂದು ಹೇಳಿದ್ದಾನೆ. ಈ ವೈರಸ್ ಅನ್ನು n-ach (need for achievement; ಸಾಧನೆಯ ಅವಶ್ಯಕತೆ) ಎಂದು ಕರೆದಿದ್ದಾನೆ. ಇದರ ಪ್ರಮಾಣ ಹೆಚ್ಚಿದ್ದರೆ, ಅಭಿವೃದ್ಧಿಗೆ ಹೆಚ್ಚಿನ ಪ್ರೇರಣೆ ಇದೆ ಎಂದರ್ಥ. ಆದರೆ ಅಭಿವೃದ್ಧಿಗೆ ಕೇವಲ 'n-ach' ಇದ್ದರೆ ಮಾತ್ರ ಸಾಲದು, ಇದಕ್ಕೆ ಪೂರಕವಾದ ಇನ್ನಿತರ ಘಟಕಗಳೂ ಇರಬೇಕಾಗುತ್ತವೆ ಎಂದು ಮ್ಯಾಕ್‌ಲೆಲ್ಯಾಂಡ್ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಅಭಿವೃದ್ಧಿಯ ಪರಿಕಲ್ಪನೆಯಂತೆ, ಆಧುನೀಕರಣಕ್ಕೆ ಹಾಗು ಅದನ್ನು ಅನುಸರಿಸುವ ಅಭಿವೃದ್ಧಿಗೆ ಒಂಬತ್ತು ಮನೋವೃತ್ತಿಯ ಅಂಶಗಳು ಅವಶ್ಯ. ಅವುಗಳೆಂದರೆ:

ಅ. ಹೊಸ ಅನುಭವಗಳಿಗೆ ಮತ್ತು ನಾವೀನ್ಯತೆಗಳಿಗೆ ಸ್ಪಂದಿಸುವ ತಯಾರಿ.

ಆ. ಅಭಿಪ್ರಾಯಗಳನ್ನು ರೂಪಿಸುವ ಮತ್ತು ರೂಢಿಸಿಕೊಳ್ಳುವ ಮನೋವೃತ್ತಿ.

ಇ. ಪ್ರಜಾಸತ್ತಾತ್ಮಕ ನಿಲುವು.

ಈ. ಯೋಜನೆಯನ್ನು ರೂಪಿಸುವ ಗುಣ.

ಉ. ಕಾರ್ಯಕ್ಷಮತೆಯಲ್ಲಿ ನಂಬಿಕೆ.

ಊ. ಲೆಕ್ಕ ಹಾಕುವ ಮುಂದಾಲೋಚನೆಯ ಸಾಮರ್ಥ್ಯ.

ಋ. ವ್ಯಕ್ತಿ ಮತ್ತು ಮಾನವನ ಮಹತ್ತಿಗೆ ಮನ್ನಣೆ.

ಎ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಂಬಿಕೆ.

ಏ. ವಿತರಣಾತ್ಮಕ ನ್ಯಾಯದಲ್ಲಿ ನಂಬಿಕೆ.

## 1.6 ಮಾಯಾ ಗುಣಕಗಳು

ವಿಲ್‌ಬರ್ ಶ್ರಾಮ್, ಡೇನಿಯಲ್ ಲರ್ನರ್, ಇ.ಎಂ. ರೋಜರ್ಸ್ ಮತ್ತಿತರರು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳಿಗೆ ಒಂದು ವಿಶೇಷ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಷ್ಟೇ ಅಲ್ಲದೆ, ಸಮೂಹ ಮಾಧ್ಯಮಗಳನ್ನು 'ಮಾಯಾ ಗುಣಕ'(Magic multipliers)ಗಳೆಂದು ಕರೆದರು. ಅಭಿವೃದ್ಧಿಶೀಲ ಸಮಾಜಗಳ ಆಧುನೀಕರಣಕ್ಕೆ ನಾವೀನ್ಯತೆಗಳ ಮತ್ತು ಮಾಹಿತಿಗಳ ಪ್ರಸರಣವು ಅವಶ್ಯವೆಂದು ಗುರುತಿಸಲಾಗಿದೆ.

## 1.7 ಟೀಕೆಗಳು

ಅಭಿವೃದ್ಧಿಶೀಲ ರಾಷ್ಟ್ರಗಳ ವಿದ್ವಾಂಸರಿಂದ ಅಭಿವೃದ್ಧಿಯ ದ್ವಿಧ್ರುವೀಯ ವಾದಗಳು ಕಟುವಾದ ಟೀಕೆಗೊಳಗಾದವು. ಸಾಮಾಜಿಕ ವಿಕಾಸವಾದದ ವ್ಯಾಖ್ಯೆಯು ಅಮೂರ್ತವೆಂದೂ, ತೃತೀಯ ವಿಶ್ವದ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಸಕ್ತತೆಯನ್ನೇನೂ ಹೊಂದಿಲ್ಲವೆಂದು ಹೇಳಲಾಯಿತು. ಅದೇ ರೀತಿಯಾಗಿ, ರೋಸ್ಟೊವ್ ತನ್ನ ಅಭಿವೃದ್ಧಿಯ ವ್ಯಾಖ್ಯಾನವನ್ನು ಪಾಶ್ಚಿಮಾತ್ಯ ರಾಷ್ಟ್ರಗಳ ಚಾರಿತ್ರಿಕ ಅನುಭವದ ಮೇಲೆ ಆಧಾರವಾಗಿಟ್ಟುಕೊಂಡಿದ್ದನೇ ಹೊರತು, ಅದಕ್ಕಿಂತ ಭಿನ್ನವಾದುದನ್ನು ಹೇಳಿರಲಿಲ್ಲ. ಅದನ್ನು ಚಾರಿತ್ರಿಕ ವ್ಯಾಖ್ಯಾನವೆಂದು ಗುರುತಿಸಲಾಗಿದೆ. ಅಭಿವೃದ್ಧಿ ಕ್ರಾಂತಿಯ ಸಾರ್ವತ್ರಿಕ ಸೂತ್ರಗಳಾದ ಹಣ, ಮಾರುಕಟ್ಟೆ ಮತ್ತು ಅಧಿಕಾರಶಾಹಿಗಳಲ್ಲಿ ವಿಶೇಷವಾದದ್ದು ಏನೂ ಇರಲಿಲ್ಲ. ಏಕೆಂದರೆ, ಅತಿ ಹೆಚ್ಚಿನ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತಮ್ಮದೇ ಆದ ಸ್ವಂತ ಅನುಭವಗಳಿದ್ದವು. ಪ್ರಜಾಸತ್ತಾತ್ಮಕ ಆಡಳಿತವೂ ಅವುಗಳಿಗೆ ಮಿಶ್ರಫಲವನ್ನು ನೀಡಿತ್ತು.

ನವ ಮಾರ್ಕ್ಸ್‌ವಾದಿಗಳಾದ ಆಂಡ್ರೆ ಗುಂಥರ್ ಫ್ರಾಂಕ್, ಡಾಸ್ ಸ್ಯಾಂಟೋಸ್ ಮತ್ತು ಸಮೀರ್ ಅಮಿನ್ ಅವರುಗಳು ಅಭಿವೃದ್ಧಿ ಮತ್ತು ಅನಭಿವೃದ್ಧಿಗಳೆರಡೂ ಒಂದೇ ಪ್ರಕ್ರಿಯೆಯ ಎರಡು ಮುಖಗಳೆಂದು ತಮ್ಮ ವಾದ ಮಂಡಿಸಿದರು. ಅವರ ಪ್ರಕಾರ ಉತ್ತರ ಅಮೇರಿಕಾ ಮತ್ತು ಪಶ್ಚಿಮ ಐರೋಪ್ಯ ರಾಷ್ಟ್ರಗಳ ಅಭಿವೃದ್ಧಿಯು ಬಡದೇಶಗಳ ಖರ್ಚಿನಲ್ಲಿ ಆಯಿತು. ತಮ್ಮ ಅನುಕೂಲ ಮತ್ತು ಬೆಳವಣಿಗೆಗಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತೃತೀಯ ವಿಶ್ವದ ರಾಷ್ಟ್ರಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡು ಕೊಳ್ಳೆ ಹೊಡೆದಿವೆ. ಉದಾಹರಣೆಗೆ, ಭಾರತದ ಕೈಗಾರಿಕೆಗಳ ನಾಶವು ಗ್ರೇಟ್ ಬ್ರಿಟನ್ನಿನ ಕೈಗಾರಿಕೀಕರಣಕ್ಕೆ ನೇರವಾಗಿ ಸಂಬಂಧಿಸಿದೆ. ಅಷ್ಟೇ ಅಲ್ಲದೆ, ಅಭಿವೃದ್ಧಿಶೀಲ ರಾಷ್ಟ್ರಗಳ ಸಂಸ್ಕೃತಿಯೇ, ಅವುಗಳ ಅಭಿವೃದ್ಧಿಗೆ ಅಡಚಣೆ ಎನ್ನುವ ಪಾಶ್ಚಿಮಾತ್ಯರ ವಾದವನ್ನು ವಿಮರ್ಶಕರು ಉಗ್ರವಾಗಿ ಟೀಕಿಸಿದರು. ಪೌರ್ವಾತ್ಯ ಮತ್ತು ಇತರೆ ಸಂಸ್ಕೃತಿಗಳ ಬಗೆಗಿನ ಅವರ ವಿಕೃತವಾದ ಅರ್ಥೈಸಿಕೊಳ್ಳುವಿಕೆಯಲ್ಲಿಯೇ ಮೂಲಭೂತವಾದ ತೊಂದರೆ ಇದೆ ಎಂದು ಅವರು ಹೇಳಿದರು.

ಸಹಭಾಗಿತ್ವ ಮತ್ತು ವಿಕೇಂದ್ರೀಯವಾದ ಅಭಿವೃದ್ಧಿಯನ್ನು 'ಮತ್ತೊಂದು' ಸಾವಯವ ಅಭಿವೃದ್ಧಿ ಎಂದು ಗುರುತಿಸಲಾಗಿದೆ. ಪ್ರಬಲ ಸ್ತರಗಳ ಸಮರ್ಥಕರು ನೀಡುವ ಅಭಿವೃದ್ಧಿಯ ಸೂಚಕಗಳತ್ತ ಸೂಕ್ಷ್ಮವಾಗಿ ದಿಟ್ಟಿಸಿ ನೋಡಿದರೆ, ಅವುಗಳಿಗೆ ತಮ್ಮದೇ ಆದ ಮಿತಿಗಳು ಇರುವುದು ಕಂಡುಬರುತ್ತದೆ. ಇವುಗಳಿಗೆ ಬದಲಾಗಿ, ಯಾವುದೇ ವಿಕಾರಗಳಿಲ್ಲದ, ಹೆಚ್ಚು ಅರ್ಥಪೂರ್ಣವಾದ, ಸಮಗ್ರವಾದ ಪರಿಪೂರ್ಣ ಸೂಚಕಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ ಚರ್ಚಿಸುವಾಗ ಈ ಕೆಳಕಂಡ ಪ್ರಮುಖ ಅಂಶಗಳನ್ನು ಗಮನಿಸುವುದು ಅಗತ್ಯ:

ಅ. ಅಭಿವೃದ್ಧಿಗೆ ಕಾರಣ ಮತ್ತು ಪರಿಣಾಮ ಎರಡೂ ಮಾನವರೇ. ಮಾನವ ಅಂಶವೇ ಎಲ್ಲಾ ಬಗೆಯ ಅಭಿವೃದ್ಧಿಗೂ ಕೇಂದ್ರಸ್ಥಾನದಲ್ಲಿರುತ್ತದೆ. ಮಾನವ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿ, ಎರಡೂ ಏಕಕಾಲದಲ್ಲಿಯೇ ಆಗುವಂತಹವು.

ಆ. ನಗರೀಕರಣ ಮತ್ತು ನಗರಾಭಿವೃದ್ಧಿ -ಎರಡೂ ಪಾಶ್ಚಿಮಾತ್ಯರ ಕಲ್ಪನೆಗಳೇ ಭಾರತದಂತಹ ದೇಶದಲ್ಲಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯತೆ ಸಿಗಬೇಕು.

ಇ. ಕೃಷಿ ಅಭಿವೃದ್ಧಿಗೂ ಮತ್ತು ಕೈಗಾರಿಕಾ ಅಭಿವೃದ್ಧಿಗೂ ಅರ್ಥಪೂರ್ಣವಾದ ಸಮತೋಲನ ಇರಲೇಬೇಕು.

ಈ. ಹೆಚ್ಚು ಕಾರ್ಮಿಕವರ್ಗ ಮತ್ತು ಮಾನವ ಸಂಪನ್ಮೂಲಗಳು ಇರುವ ಭಾರತದಂತಹ ದೇಶದಲ್ಲಿ ಈ ಶಕ್ತಿ ಸಾಮರ್ಥ್ಯದ ಸಕ್ಷಮ ಉಪಯೋಗ ಆಗಬೇಕು.

ಉ. ಅಭಿವೃದ್ಧಿಯು ಸ್ವಯಂ ಪ್ರೇರಿತವಾಗಿರಬಹುದು, ಇಲ್ಲವೇ ಬಾಹ್ಯ ಪ್ರಚೋದನೆಗಳಿಂದ ಆಗಬಹುದು. ಕೆಲವೊಮ್ಮೆ ಹೊರಗಿನ ಶಕ್ತಿಗಳ ಪ್ರವೇಶವೂ ಅಭಿವೃದ್ಧಿಯ ಪ್ರಕ್ರಿಯೆಯನ್ನು ಮುಂದೂಡಬಹುದು ಅಥವಾ ಸ್ಥಗಿತಗೊಳಿಸಬಹುದು.

## 1.8 ಅಭಿವೃದ್ಧಿಯ ಗುರಿಗಳು

ಸರ್ಕಾರಗಳು ನಿರ್ಧರಿಸುವ ಅಭಿವೃದ್ಧಿಯ ಗುರಿಗಳು ಸಾಮಾನ್ಯವಾಗಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತವೆ;

ಅ. ಸಮಾಜದ ಎಲ್ಲ ವರ್ಗದ ಜನರ ಜೀವನಮಟ್ಟವನ್ನು ಉತ್ತಮಗೊಳಿಸುವುದು.

ಆ. ಸಮತೋಲಿತವಾದ ಮತ್ತು ದೃಢವಾದ ಆರ್ಥಿಕಾಭಿವೃದ್ಧಿಯನ್ನು ವೇಗವಾಗಿ ಪ್ರಚೋದಿಸುವುದು.

ಇ. ಜನರ ಆದಾಯದ ಮಟ್ಟವನ್ನು ಹೆಚ್ಚಿಸುವುದು.

ಈ. ಸಮಾಜದ ಎಲ್ಲ ವರ್ಗದವರಲ್ಲಿ ಸೇವೆಗಳ ಸಮಾನ ವಿತರಣೆಯ ಮೂಲಕ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನ್ಯಾಯವಲಯಗಳ ವಿಸ್ತರಣೆಯನ್ನು ಸಾಧಿಸುವುದು.

ಉ. ಹೆಚ್ಚಿನ ಉತ್ಪಾದಕತೆಗಾಗಿ, ಮಾನವ ಸಂಪನ್ಮೂಲಗಳ ಗುಣಮಟ್ಟವನ್ನೂ, ಪೂರೈಕೆಯನ್ನೂ ಉತ್ತಮಪಡಿಸುವುದು ಮತ್ತು ಅಭಿವೃದ್ಧಿಯ ಪ್ರಕ್ರಿಯೆಗೆ ಒದಗಿಬರುವ ಅಡಚಣೆಗಳನ್ನು ನಿವಾರಿಸುವುದು.

ಊ. ಪರಿಸರವನ್ನು ಸಂರಕ್ಷಿಸುವುದು ಮತ್ತು ಉತ್ತಮಗೊಳಿಸುವುದು.

ಋ. ವಿಜ್ಞಾನ, ತಂತ್ರಜ್ಞಾನ ಹಾಗೂ ಸೃಜನಶೀಲತೆಗಳಿಗೆ ಉತ್ತೇಜನ ನೀಡುವುದು

ಎ. ಸರಕುಗಳ ಉತ್ಪಾದನೆ ಮತ್ತು ರಫ್ತು ಮಾಡುವಲ್ಲಿ ಸ್ಪರ್ಧಾತ್ಮಕತೆಯನ್ನು ಪ್ರೋತ್ಸಾಹಿಸುವುದು.

ಏ. ವಿದೇಶಿ ವಿನಿಮಯ ನಿಧಿಯನ್ನು ಅತ್ಯುತ್ತಮ ಮಟ್ಟದಲ್ಲಿ ಬಳಸಿಕೊಂಡು, ಹಣದುಬ್ಬರವನ್ನು ನಿಯಂತ್ರಿಸಿಕೊಂಡು ಸ್ವದೇಶೀ ವಲಯದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶವೀಯುವುದು ಮತ್ತು ರಾಷ್ಟ್ರೀಯ ಸಂಪನ್ಮೂಲಗಳ ವರ್ಧನೆ ಮಾಡುವುದು, ಹಾಗೂ

ಐ. ರಾಷ್ಟ್ರದ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಳ್ಳುವುದು.

**ಆರ್ಥಿಕತೆಯಷ್ಟೇ ಅಲ್ಲದೆ, ಅಭಿವೃದ್ಧಿಯ ಪ್ರಕ್ರಿಯೆಯು ಈ ಕೆಳಕಂಡ ಅಂಶಗಳಿಂದಲೂ ಪ್ರಭಾವಿತವಾಗುತ್ತದೆ.**

ಅ. ಭೌಗೋಳಿಕ ಸನ್ನಿವೇಶ

ಆ. ಸಂಸ್ಕೃತಿ

ಇ. ಜನಸಂಖ್ಯೆ

ಈ. ಸಾಮಾಜಿಕ ಚಲನಶೀಲತೆ

ಉ. ಕಾನೂನು ಹಾಗೂ ರಾಜಕೀಯ ವ್ಯವಸ್ಥೆಗಳು, ಮತ್ತು

ಊ. ಸಂವಹನ ಸಂಪನ್ಮೂಲಗಳು

## 1.9 ಸಾರಾಂಶ

ಸಂವಹನ ತಂತ್ರಜ್ಞಾನಗಳನ್ನು ದೇಶದ ಅಭಿವೃದ್ಧಿಗೆ ಬಳಸುವುದನ್ನು 'ಅಭಿವೃದ್ಧಿ ಸಂವಹನ' ಎಂದು ಕರೆಯಲಾಗುತ್ತದೆ. 'ಅಭಿವೃದ್ಧಿ'ಗೆ ಸರ್ವಸಮಗ್ರವಾದ ಒಂದು ವ್ಯಾಖ್ಯಾನ, ಅರ್ಥ ನಿರೂಪಣೆ ಇಲ್ಲ. ತಮ್ಮ ತಮ್ಮ ಗ್ರಹಿಕೆ ಮತ್ತು ಅನುಭವಗಳಿಗೆ ಅನುಸಾರವಾಗಿ ಪರಿಣಿತರು 'ಅಭಿವೃದ್ಧಿ'ಗೆ ತಮ್ಮದೇ ಆದ ಅರ್ಥವಿವರಣೆಯನ್ನು ನೀಡಿದ್ದಾರೆ. ಮಾನವನ ಅಭಿವೃದ್ಧಿಯ ಎಲ್ಲ ಯತ್ನಗಳೂ ಸುಖೋಪಭೋಗಿ ಸಾಧನಗಳನ್ನು ಕೊಳ್ಳುವುದರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇಂಥಹ ಒಂದು ಒತ್ತಾಸೆಯ ಪರಿಣಾಮವೇ ಕೈಗಾರಿಕಾ ಕ್ರಾಂತಿ.

ಅಭಿವೃದ್ಧಿಯ ಸಾಧನೆಗಳ ಪ್ರಮಾಣ ಮತ್ತು ವೇಗವನ್ನು ಆಧರಿಸಿ, ದೇಶಗಳನ್ನು ಅಭಿವೃದ್ಧಿ ಹೊಂದಿದ, ದ್ವಿತೀಯ ವಿಶ್ವದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳೆಂದು ವರ್ಗೀಕರಿಸಲಾಗಿದೆ. ಪ್ರಪಂಚದ ಮೂರನೆಯ ಎರಡರಷ್ಟು ಭಾಗದಷ್ಟು ಸಂಖ್ಯೆಯ ಜನ ಜೀವಿಸುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತೃತೀಯ ವಿಶ್ವದ ರಾಷ್ಟ್ರಗಳೆಂದು ಕರೆಯಲಾಗುತ್ತದೆ. ಅಭಿವೃದ್ಧಿಯ ಸಾಮಾಜಿಕ ವಿಭೇದೀಕರಣ ಪರಿಕಲ್ಪನೆಯು, ಸಮಾಜದ ಸಂಸ್ಥೆಗಳ ವಿಭೇದೀಕರಣದ ಮೂಲಕ ಆಧುನೀಕರಣವಾಗುತ್ತದೆ ಎಂದು ಹೇಳುತ್ತದೆ. ಅಕ್ಷರತೆ, ಸಮೂಹ ಮಾಧ್ಯಮಗಳಿಗೆ ತೆರೆದುಕೊಳ್ಳುವುದು, ಉದರಾತೆ, ಅನುಭೂತಿ, ಆಕಾಂಕ್ಷೆಗಳು, ನವೀನತೆ, ಮತ್ತು ರಾಜಕೀಯ ಜ್ಞಾನ ಇವುಗಳು ಅಭಿವೃದ್ಧಿಯ ಮೂಲತತ್ವಗಳು.

ರಾಷ್ಟ್ರದ ಪೌರರ ಅವಶ್ಯಕತೆಗಳು, ವಾಂಛೆಗಳು ಮತ್ತು ಬೇಡಿಕೆಗಳಿಗನುಗುಣವಾಗಿ ಅಭಿವೃದ್ಧಿಯ ಧ್ಯೇಯಗಳನ್ನು ಸರ್ಕಾರಗಳು ನಿರ್ಧರಿಸಬೇಕು ಮತ್ತು ಅವು ಫಲಪ್ರದವಾಗುವಂತೆ ಕಾರ್ಯಗತಗೊಳಿಸಬೇಕು.

**ಚಟುವಟಿಕೆ:**

ನೀವು ಸಾಮಾನ್ಯವಾಗಿ ಓದುವ ವೃತ್ತಪತ್ರಿಕೆಯ ಒಂದು ವಾರದ ಪ್ರತಿಗಳನ್ನು ತೆಗೆದುಕೊಳ್ಳಿ. ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಗುರುತಿಸಿ, ಈ ಕೆಳಕಂಡ ವಿಭಾಗಗಳಲ್ಲಿ ವರ್ಗೀಕರಿಸಿ.

ಅ. ಆರ್ಥಿಕ ಅಭಿವೃದ್ಧಿ

ಆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ

ಇ. ರಾಜಕೀಯ ಅಭಿವೃದ್ಧಿ

ಈ. ಪರಿಸರ ಅಭಿವೃದ್ಧಿ

## 1.10 ನಿಮ್ಮ ಪ್ರಗತಿ ಪರಿಶೀಲನೆ

ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.

1. ಅಭಿವೃದ್ಧಿಯ ಪರಿಕಲ್ಪನೆಯ ಬಗ್ಗೆ ನಾವು ಚರ್ಚಿಸಿದ್ದೇವೆ. ನಿಮ್ಮ ಪ್ರಕಾರ 'ಅಭಿವೃದ್ಧಿ' ಎಂದರೇನು?

2. ಅಭಿವೃದ್ಧಿಯ ಪ್ರಕ್ರಿಯೆಯು ಕೆಲವೊಂದು ಮೂಲತತ್ವಗಳನ್ನು ಹೊಂದಿದೆ. ಅವುಗಳನ್ನು ವಿವರಿಸಿ.

3. ಅಭಿವೃದ್ಧಿಗೆ ಅವಶ್ಯವಾದ ಮನೋವೃತ್ತಿಯ ಅಂಶಗಳನ್ನು ಪಟ್ಟಿಮಾಡಿ.

## 1.11 ಹೆಚ್ಚಿನ ಓದಿಗಾಗಿ


1. Chakravarthy: Journalism, Changing Society and Emerging Trends, Deep Publications - New Delhi, 2002.

2. Joshi: Understanding Developmental Communication, Deep Publications, New Delhi - 2001.

3. Mahadevan: Communication Modernisation and Social Development, B.R. Publishers - New Delhi, 2002.

4. Murthy: Developmental Journalism: Deep Publications - New Delhi, 2001.

5. Srinivas Melkote: Communication for the Development in the Third World, Sage Publications - New Delhi, 1991.

6. Srinivas Melkote: Communication Gap in the Process of Development, Rawal Publications -New Delhi, 1994.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರ ರಾವ್

## ಟಿಪ್ಪಣಿ

# ಘಟಕ 2 ಅಭಿವೃದ್ಧಿಯ ಮಾದರಿಗಳು

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಅಭಿವೃದ್ಧಿಯ ಏಕಮುಖಿ ಮಾದರಿ

2.3 ಪ್ರಸರಣ ಮಾದರಿ

2.4 ಯಾಂತ್ರಿಕ ಮಾದರಿ

2.5 ಸಾವಯವ ಮಾದರಿ

2.6 ಅಭಿವೃದ್ಧಿ ಬೆಂಬಲ ಸಂವಹನ

2.7 ಗಾಂಧೀಜಿಯವರ ಮಾದರಿ

2.8 ಸಾರಾಂಶ

2.9 ನಿಮ್ಮ ಪ್ರಗತಿ ಪರಿಶೀಲನೆ

2.10 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಅಭಿವೃದ್ಧಿಯ ಪರಿಕಲ್ಪನೆ ಮತ್ತು ಅದರ ಪ್ರಮುಖ ಮೂಲಧಾತುಗಳ ಬಗ್ಗೆ ನೀವು ಈಗಾಗಲೇ ಅಧ್ಯಯನ ಮಾಡಿದ್ದೀರಿ. ಅಭಿವೃದ್ಧಿಯ ಯೋಜನೆಗಳನ್ನು ಪ್ರಸ್ತುತ ಪಡಿಸುವಾಗ ವಿಶೇಷಜ್ಞರು ಅವುಗಳನ್ನು ಕೆಲವು ಪೂರ್ವನಿರ್ಧಾರಿತವಾದ ಮಾದರಿಗಳನ್ನು ಆಧರಿಸಿ ಸಮರ್ಥಿಸುತ್ತಾರೆ. ಅಭಿವೃದ್ಧಿಯ ಯಂತ್ರಗಳನ್ನು ಕಾರ್ಯರೂಪಕ್ಕೆ ತರುವ ಮತ್ತು ಅವುಗಳ ಮೇಲುಸ್ತುವಾರಿ ಮಾಡುವ ಸಂಘಟನೆಗಳಿಗೆ ಅಗತ್ಯವಾಗಿ ಈ ಮಾದರಿಗಳ ಅರಿವಿರಬೇಕು. ಈ ಘಟಕವನ್ನು ಓದಿದ ನಂತರ, ನಿಮಗೆ ಈ ಕೆಳಗಿನ ಅಂಶಗಳು ಸಾಧ್ಯವಾಗುತ್ತವೆ:

* ಅಭಿವೃದ್ಧಿಯ ವಿವಿಧ ಮಾದರಿಗಳ ಬಗ್ಗೆ ತಿಳುವಳಿಕೆ;
* ಅವುಗಳ ಪ್ರಮುಖ ಲಕ್ಷಣಗಳ ಗುರುತಿಸುವಿಕೆ;
* ಅವುಗಳ ಗುಣ, ಅವಗುಣಗಳನ್ನು ಕಂಡುಕೊಳ್ಳುವಿಕೆ, ಮತ್ತು
* ಅಭಿವೃದ್ಧಿ ಸಂವಹನ ಮತ್ತು ಅಭಿವೃದ್ಧಿ ಬೆಂಬಲಿಸುವ ಸಂವಹನಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು.

## 2.1 ಪ್ರಸ್ತಾವನೆ

ಇಪ್ಪತ್ತನೆಯ ಶತಮಾನದಲ್ಲಿ ನಡೆದ ಎರಡು ವಿಶ್ವ ಮಹಾಯುದ್ಧಗಳು ಪ್ರಪಂಚದ ಭೂ-ರಾಜಕೀಯ ನಕ್ಷೆಯನ್ನು ಬಹುವಾಗಿ ಬದಲಿಸಿವೆ. ಮುಖ್ಯವಾಗಿ, ಎರಡನೆ ಮಹಾಯುದ್ಧದ ನಂತರ, ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಹಲವು ರಾಷ್ಟ್ರಗಳು ಐರೋಪ್ಯ ವಸಾಹತುಶಾಹಿಗಳಿಂದ ಮುಕ್ತಗೊಂಡು ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡವು. ಆದರೆ, ಅವುಗಳ ಆರ್ಥಿಕ ಪರಿಸ್ಥಿತಿಗಳು ತೀರಾ ಹದಗೆಟ್ಟಿದ್ದವು. ದೊಡ್ಡ ಜನಸಮೂಹಗಳು, ಅಂತ್ಯವಿಲ್ಲದ ಬಡತನದ ಬೇಗೆಯಲ್ಲಿ ಬೇಯುತ್ತಿದ್ದವು. ಐರೋಪ್ಯ ರಾಷ್ಟ್ರಗಳು ಈಗಾಗಲೇ ಸಾಗಿಹೋಗಿರುವ ಅಭಿವೃದ್ಧಿಯ ಹಂತಗಳನ್ನು ದಾಟಿ ಬಹಳ ವೇಗವಾಗಿ ತಮ್ಮ ಸಮಾಜದ ಅಭಿವೃದ್ಧಿಯನ್ನು ಸಾಧಿಸಲು, ಈ ದೇಶಗಳ ನೇತಾರರು, ತಮಗೆ ಒಗ್ಗುವಂತಹ ಅಭಿವೃದ್ಧಿಯ ಮಾದರಿಯೊಂದನ್ನು ಅರಸುತ್ತಿದ್ದರು. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯ ನೀಡಲು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಂದಿನ ಅಧ್ಯಕ್ಷರಾಗಿದ್ದ ಹ್ಯಾರಿ ಟ್ರೂಮನ್ ಅವರು 1949ರಲ್ಲಿ ಪಾಯಿಂಟ್ ಫೋರ್ ಯೋಜನೆಯನ್ನು ಪ್ರಸ್ತುತಪಡಿಸಿದರು. 'ಹೆಚ್ಚು ಉತ್ಪಾದನೆ, ಪ್ರಸರಣ, ಉಪಭೋಗ ಮತ್ತು ಬಂಡವಾಳದ ಪುನರ್ಬಳಕೆ' ಇದು ಪಾಶ್ಚಿಮಾತ್ಯದ ನಿಯಮಸೂಚಿಯಾಗಿತ್ತು. ಇದು ಕೃಷಿ ಮತ್ತು ಕೈಗಾರಿಕಾ ರಂಗಗಳೆರಡಕ್ಕೂ ಅನ್ವಯವಾಗತಕ್ಕದ್ದಾಗಿತ್ತು. ಅವರ ಪ್ರಕಾರ ಆಧುನಿಕತೆಯೇ ಅಭಿವೃದ್ಧಿಯ ಮೂಲ ಎಂಬುದಾಗಿ ಗುರುತಿಸಲ್ಪಟ್ಟಿತ್ತು. ಆದರೆ ಅವರ ಆಧುನಿಕತೆಯ ಅರ್ಥ, ತತ್ವಶಃ, ಪದಶಃ ಕೇವಲ ಐರೋಪ್ಯೀಕರಣವಾಗಿತ್ತು ಎಂಬುದು ಗಮನಾರ್ಹವಾದ ಅಂಶ.

ಈಗಾಗಲೇ ಹಿಂದಿನ ಘಟಕದಲ್ಲಿ ತಿಳಿಸಿರುವಂತೆ, ಸರ್ವತೋಮುಖ ಅಭಿವೃದ್ಧಿಗೆ ಕೈಗಾರಿಕೀಕರಣವನ್ನು ಸೂಚಿಸಿ, ನಿರ್ದೇಶಿಸಲಾಗಿತ್ತು, ಇದನ್ನು ಅಭಿವೃದ್ಧಿಯ 'ಪ್ರಬಲ ಸ್ವರಗಳೆಂದು ವಿವರಿಸಲಾಗಿತ್ತು, ಅಭಿವೃದ್ಧಿಯ ಕೆಲವೊಂದು ಮಾದರಿಗಳನ್ನು ಇನ್ನು ಪರಿಶೀಲಿಸೋಣ..

## 2.2 ಅಭಿವೃದ್ಧಿಯ ಏಕಮುಖಿ ಮಾದರಿ

ಈ ಏಕಮುಖಿ ಮಾದರಿಯ ಪ್ರಮುಖ ಪ್ರತಿಪಾದಕರೆಂದರೆ, ವಾಲ್ಟ್ ರೋಸ್ಟೋವ್ ಮತ್ತು ಡೇನಿಯಲ್ ಲರ್ನರ್. ರೋಸ್ಟೋವ್ ಅವರ ಪ್ರಕಾರ ಒಂದು ಸಾಂಪ್ರದಾಯಿಕ ಸಮಾಜವು ಹಲವಾರು ಮಿತಿಗಳಿಂದ ಬಂಧಿತವಾಗಿರುತ್ತದೆ. ಈ ಮಿತಿಗಳೆಂದರೆ, ಉತ್ಪಾದನಾ ಸೌಲಭ್ಯಗಳ ಮಿತಿ, ಮೂಢನಂಬಿಕೆಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಅಳವಡಿಕೆ ಇಲ್ಲದಿರುವುದು ಮತ್ತು ಬಿಗಿಯಾದ ಸಾಮಾಜಿಕ ಬಂಧಗಳು ಸಾಂಪ್ರದಾಯಿಕವಾದ ಮನೋಸ್ಥಿತಿಯಿರುವ ಜನ, ಯಾವಾಗಲೂ ಸಾಂಪ್ರದಾಯಿಕವಾದ ಮನೋವೃತ್ತಿಯನ್ನೇ ಹೊಂದಿರುತ್ತಾರೆ. ಅವರ ಕೃತಿಯಾದ "ಆರ್ಥಿಕ ಬೆಳವಣಿಗೆಯ ಹಂತಗಳು; ಕಮ್ಯುನಿಸ್ಟೇತರರ ಪ್ರಣಾಳಿಕೆ" (1960)ಯಲ್ಲಿ, ಐದು ಹಂತಗಳ ಅಭಿವೃದ್ಧಿಯ ಮಾದರಿಯೊಂದನ್ನು ರೋಸ್ಟೋವ್ ನೀಡಿದ್ದಾರೆ.

ಮೊದಲಿಗೆ, ಒಂದು ಸಾಂಪ್ರದಾಯಿಕ ಸಮಾಜವು ತನ್ನ ಸ್ವಭಾವ ಸಹಜ ಸಿದ್ಧವಾದ ಎಲ್ಲಾ ಮಿತಿಗಳನ್ನೂ ಹೊಂದಿರುತ್ತದೆ. ಈ ಸ್ಥಿತಿಯಿಂದ ಆಧುನಿಕವಾದ ಮತ್ತು ಕೈಗಾರಿಕೀಕರಣಗೊಂಡ ಸಮಾಜವನ್ನಾಗಿ ಅದನ್ನು ಬದಲಾಯಿಸಬೇಕು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವುದೂ ಮತ್ತು ಅದನ್ನು ಅನ್ವಯಿಸುವುದೂ ಬಹಳ ಮುಖ್ಯ. ಉತ್ತಮ ಜೀವನವನ್ನು ರೂಢಿಸಲು ಆರ್ಥಿಕ ಅಭಿವೃದ್ಧಿಯು ಕಾರಣವಾಗುತ್ತದೆ ಎಂಬ ಮಾಹಿತಿಯು ಜನತೆಗೆ ಸಿಕ್ಕಾಗ, ಅಂತಹ ಸಹಾಯಕ್ಕಾಗಿ ಅವರು ಅದರ ಮೂಲಗಳನ್ನು ಅರಸುತ್ತಾರೆ. ಸಾರಿಗೆ ಮತ್ತು ಸಂಪರ್ಕವಲಯಗಳ ಅಭಿವೃದ್ಧಿಯು ಉತ್ತಮವಾದ ಮೂಲಸೌಕರ್ಯಗಳಿಗೆ ದಾರಿ ಮಾಡಿಕೊಡುತ್ತದೆ. ಮುಂದಿನ ಜಿಗಿತಕ್ಕೆ ಇವೆಲ್ಲವೂ ಪೂರ್ವ ಪರಿಕರಗಳಾಗುತ್ತವೆ.

ಜಿಗಿತದ ಮಜಲೇ ಅಭಿವೃದ್ಧಿಯ ಹಂತ. ಇಲ್ಲಿ, ಅಭಿವೃದ್ಧಿಯ ಹಾದಿಯಲ್ಲಿನ ತೊಡಕುಗಳು ಮುರಿದು ಬೀಳುತ್ತವೆ. ಆರ್ಥಿಕ ಅಭಿವೃದ್ಧಿಯು ಸಾಮಾನ್ಯ ಕ್ರಿಯೆಯಾಗಿ, ಆಧುನಿಕ ಸಂಸ್ಥೆಗಳು ವಿಕಾಸಗೊಳ್ಳುತ್ತವೆ. ಈ ಹಂತದಲ್ಲಿ ರಾಷ್ಟ್ರೀಯ ಆದಾಯದ ಶೇ. 5ರಿಂದ 10ರ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯು ವೃದ್ಧಿಗೊಳ್ಳುತ್ತದೆ. ಹೊಸ ಕೈಗಾರಿಕೆಗಳೂ ಬೆಳೆದು, ಲಾಭವೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಹರಿದು, ಬಂಡವಾಳದ ಮರುಹೂಡಿಕೆಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಕಾರ್ಮಿಕವರ್ಗವೂ ಹೆಚ್ಚು ಹೆಚ್ಚು ಪರಿಣತಿಗೆ ಅಭಿಮುಖಿವಾಗಿ ಸಾಗಿ, ಕೊನೆಗೆ ಕೃಷಿ ಕ್ಷೇತ್ರವೂ ಮಹತ್ವದ ಬೆಳವಣಿಗೆಯನ್ನು ಸಾಧಿಸುತ್ತದೆ. ಫಲಿತಾಂಶ ಬೇರೆ ಎಲ್ಲಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿ.

ಮುಂದಿನ ಹಂತವೆಂದರೆ, ಪರಿಪಕ್ವತೆಯೆಡೆಗಿನ ಚಲನೆ. ಇಲ್ಲಿ ಆರ್ಥಿಕ ಪ್ರಗತಿಯು ಸ್ಥಿರವಾಗಿರುತ್ತದೆ. ಉತ್ಪಾದನೆಯು ಜನಸಂಖ್ಯೆಯ ಬೆಳವಣಿಗೆಯ ವೇಗಕ್ಕಿಂತ ಹೆಚ್ಚಾಗುತ್ತದೆ. ತಂತ್ರಜ್ಞಾನವು ಸುಧಾರಿಸುತ್ತದೆ ಮತ್ತು ವಿದೇಶಿ ವ್ಯಾಪಾರವು ವರ್ಧಿಸುತ್ತದೆ.

ಕೊನೆಯ ಹಂತವೆಂದರೆ, ಅತಿ ಹೆಚ್ಚಿನ ಸಮೂಹ ಬಳಕೆ, ಈ ಹಂತದಲ್ಲಿ, ಜನರು ಸುಖಸಾಧನಗಳನ್ನೂ, ಸೇವೆಗಳನ್ನೂ, ಬಯಸುತ್ತಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನ, ಪಶ್ಚಿಮ ಐರೋಪ್ಯ ರಾಷ್ಟ್ರಗಳು ಮತ್ತು ಜಪಾನ್, ಇವುಗಳನ್ನು ಈ ವರ್ಗದಲ್ಲಿ ಪಟ್ಟಿ ಮಾಡಬಹುದು. ಅದೇ ರೀತಿಯಾಗಿ, ಡೇನಿಯಲ್ ಲರ್ನರ್ ಅವರು ನಗರೀಕರಣ, ಅಕ್ಷರತೆ, ರಾಜಕೀಯ ಸಹಭಾಗಿತ್ವ, ಅನುಭಾವ ಮತ್ತು ಸಮೂಹ ಮಾಧ್ಯಮಗಳು ಆಧುನಿಕತೆಯನ್ನು ತರಬಹುದೆಂದು ಸೂಚಿಸಿದರು. ಆಧುನಿಕತೆಯ ಪ್ರಕ್ರಿಯೆಯಲ್ಲಿ ಸಾಮಾಜಿಕ ಚಲನಶೀಲತೆಯೂ ಒಂದು ಪ್ರಮುಖ ಅಂಶ ಎಂಬುದನ್ನು ಅವರು ಗುರುತಿಸಿದರು.

## 2.3 ಪ್ರಸರಣ ಮಾದರಿ

ಸಂಪರ್ಕದ ಪರಿಣಾಮಗಳನ್ನು ಕುರಿತ ಸಂಶೋಧನೆಗಳು ಪ್ರಸರಣ ಮಾದರಿಗೆ ದಾರಿ ಮಾಡಿಕೊಟ್ಟವು. ನೀವು ಈಗಾಗಲೇ ತಿಳಿದಿರುವಂತೆ, ಅಭಿಪ್ರಾಯ ಧುರೀಣರು ಮತ್ತು ಸಮೂಹ ಮಾಧ್ಯಮಗಳು ನಾವೀನ್ಯತೆಗಳನ್ನು ಕುರಿತಾದ ಮಾಹಿತಿಗಳನ್ನು ಜನತೆಗೆ ತಲುಪಿಸುವ ಕೆಲಸ ಮಾಡುತ್ತವೆ. ಅಂದರೆ, ನಿರ್ದೇಶಿತ ಜನವೃಂದಕ್ಕೆ ಹೊಸ ಆಚರಣೆಗಳ ಮತ್ತು ನಾವೀನ್ಯತೆಗಳನ್ನು ಪ್ರಸರಿಸುವ ಕಾರ್ಯವನ್ನು ಇವು ಮಾಡುತ್ತವೆ.

ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ಕಲ್ಪನೆಗಳನ್ನು ಹುಟ್ಟು ಹಾಕಿಕೊಂಡಿತೋ ಅಥವಾ ಬೇರೆಯವರಿಂದ ಎರವಲು ಪಡೆಯಿತೋ ಎನ್ನುವ ಪ್ರಶ್ನೆಯ ಬಗ್ಗೆ ದೀರ್ಘವಾದ ಚರ್ಚೆ ನಡೆದಿದೆ. ಪ್ರತಿಯೊಂದು ಪ್ರಮುಖ ಸಂಸ್ಕೃತಿಯೂ ತನ್ನದೇ ರೀತಿಯಲ್ಲಿ ಬೆಳವಣಿಗೆ ಹೊಂದಿತೆಂಬುದು ವಿಕಾಸ ಪಂಥದ ಅಭಿಪ್ರಾಯ. ಹತ್ತೊಂಬತ್ತನೆ ಶತಮಾನದ ಕೊನೆಯ ಹೊತ್ತಿಗೆ ತನ್ನ ಅಸಂಗತೆಯಿಂದಾಗಿ ಈ ವಿಕಾಸವಾದವು ತೀವ್ರವಾದ ಟೀಕೆಗೊಳಗಾಯಿತು. ಬಹಳಷ್ಟು ಸಂಸ್ಕೃತಿಗಳು ತಾವು ತಮ್ಮೊಳಗೇ ಸ್ವತಂತ್ರವಾಗಿ ಅಭಿವೃದ್ಧಿಪಡಿಸಿದ ಘಟಕಗಳಿಗಿಂತ ಹೆಚ್ಚಾಗಿ, ತಾವು ಬೇರೆ ಸಂಸ್ಕೃತಿಗಳಿಂದ ಎರವಲು ಪಡೆದ ವಿಷಯಗಳನ್ನೇ ಪ್ರದರ್ಶಿಸುತ್ತವೆ ಎಂಬುದು ನವಪ್ರವರ್ತಕರ ವಾದ.

1940ರ ಸುಮಾರಿಗೆ, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ಸಂಶೋಧಕರು ಗುರುತಿಸಿದರು. ಸಮಾಜಗಳ ಅಭಿವೃದ್ಧಿಯ ಮೇಲೆ ಬಹಿರ್ಪ್ರಭಾವಗಳು ಪ್ರಸರಣ ಮಾದರಿಯ ಮೂಲಾಧಾರಗಳಾದವು. ಸಾಂಪ್ರದಾಯಿಕ ರೀತಿಯ ಜೀವನದಿಂದ ಹೆಚ್ಚು ಸಂಕೀರ್ಣವಾದ, ತಂತ್ರಜ್ಞಾನದ ದೃಷ್ಟಿಯಿಂದ ಹೆಚ್ಚು ಮುಂದುವರೆದ ಮತ್ತು ನೇರವಾಗಿ ಬದಲಾಗುತ್ತಿರುವ ವೈಯಕ್ತಿಕ ಜೀವನ ಶೈಲಿಯ ಪ್ರಕ್ರಿಯೆಯನ್ನು ವ್ಯಕ್ತಿಗಳ ವೈಯಕ್ತಿಕ ಅಭಿವೃದ್ಧಿ ಎಂದು ರೋಜರ್ಸ್ ಸ್ಪಷ್ಟೀಕರಣ ನೀಡುತ್ತಾರೆ. ಈ ಪ್ರಸರಣ ಮಾದರಿಯ ಅಧ್ಯಯನಗಳಿಗೆ ಕಾಣಿಕೆ ನೀಡಿದವರಲ್ಲಿ ಎವರೆಟ್ ರೋಜರ್ಸ್ ಕೂಡ ಪ್ರಮುಖರು.

ಪ್ರಸರಣ ಮಾದರಿಯು ಐದು ಹಂತಗಳ ಬಳಕೆಯನ್ನು ಹೊಂದಿದೆ. ನಾವೀನ್ಯತೆಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯು ಹಲವಾರು ಅಂಶಗಳನ್ನು ಆಧರಿಸಿದೆ. ಈ ಐದು ಹಂತಗಳೆಂದರೆ, ಅರಿವು, ಆಸಕ್ತಿ, ಮೌಲ್ಯಮಾಪನ, ಪರೀಕ್ಷೆ ಮತ್ತು ಅಳವಡಿಕೆ. 'ಅರಿವು' ಯಾವಾಗಲೂ ಮೊದಲನೆಯ ಹಂತ. ಈ ಹಂತದಲ್ಲಿ ವ್ಯಕ್ತಿಯು ನಾವೀನ್ಯತೆಯ ಪರಿಚಯ ಪಡೆಯುತ್ತಾನೆ. ಆದರೆ, ಪೂರ್ಣಪ್ರಮಾಣದ ಮಾಹಿತಿ ಲಭ್ಯವಾಗಿರುವುದಿಲ್ಲ.

'ಆಸಕ್ತಿ'ಯ ಎರಡನೇ ಹಂತದಲ್ಲಿ, ನಾವೀನ್ಯತೆಯನ್ನು ಅರ್ಥಮಾಡಿಕೊಳ್ಳಲು ಅವನು ಹೆಚ್ಚಿನ ಮಾಹಿತಿಯನ್ನು ಬಯಸುತ್ತಾನೆ. ಮುಂದಿನ ಹಂತದಲ್ಲಿ, ವರ್ತಮಾನದ ಮತ್ತು ಭವಿಷ್ಯದ ತನ್ನ ಅವಶ್ಯಕತೆಗಳ ಬೆಳಕಿನಲ್ಲಿ ನಾವೀನ್ಯತೆಯ 'ಮೌಲ್ಯಮಾಪನ' ಮಾಡುತ್ತಾನೆ. ಈ ಹಂತವನ್ನು ಪರೀಕ್ಷಣಾ ಹಂತ ಎಂದೂ ಗುರುತಿಸಬಹುದು. ಈ ನಾವೀನ್ಯತೆಯನ್ನು ಬಳಸುವ ನಿರ್ಧಾರ ತೆಗೆದುಕೊಂಡಾಗ ಅದು 'ಅಳವಡಿಕೆ'ಯಾಗಿ ಬದಲಾಗುತ್ತದೆ. ಅರಿವು ಮೂಡಿಸುವ ಮೊದಲ ಹಂತಗಳಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದರೆ, ಮೌಲ್ಯಮಾಪನ ಮತ್ತು ಅಳವಡಿಕೆಯ ಹಂತಗಳಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವಿನ ಮಾಹಿತಿ ಮೂಲಗಳು ಬೇರೆಲ್ಲ ಪ್ರಭಾವಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತವೆ. ಈ ಐದು ಹಂತಗಳನ್ನು ಜ್ಞಾನ, ಮನವೊಲಿಕೆ, ನಿರ್ಧಾರ, ಕಾರ್ಯಾನ್ವಯ ಮತ್ತು ದೃಢೀಕರಣ ಎಂದು ರೋಜರ್ಸ್ ಗುರುತಿಸಿದ್ದಾರೆ.

**ಪ್ರಸರಣ ಮಾದರಿಯು ಟೀಕೆಗೆ ಗುರಿಯಾಗಲು ಕಾರಣಗಳು:**

ಅ. ಮಾಧ್ಯಮಗಳು ಮತ್ತು ಸಂದೇಶಗಳ ಮೇಲೆ ಈ ಮಾದರಿಯು ಅತಿಯಾಗಿ ಕೇಂದ್ರೀಕರಿಸಿತು. ಇದೇ ಕಾರಣದಿಂದ ಸಂಪರ್ಕ ಸಂಬಂಧಿ ಯತ್ನಗಳ ಮೇಲೆ ಪಕ್ಷಪಾತಿ ಧೋರಣೆಯನ್ನು ಅದು ಹೊಂದಿತ್ತು;

ಆ. ಈ ಕಾರಣ, ಮಾಧ್ಯಮದ ಅಡಕ ವಸ್ತುವಿಷಯಗಳ ಮೇಲೆ ಯಾವುದೇ ರೀತಿಯ ಗಮನ ಹರಿಸಲಿಲ್ಲ;

ಇ. ಅಳವಡಿಕೆ ಮಾಡಿಕೊಳ್ಳುವವರ ಮತ್ತು ನಿರ್ದೇಶಿತ ಜನಸಮೂಹದ ಜ್ಞಾನವನ್ನು ಸರಿಯಾಗಿ ಮಾಪನ ಮಾಡುತ್ತಿರಲಿಲ್ಲ;

ಈ. ಮೂಲ ಆಕರದ ಪರವಾದ ಪಕ್ಷಪಾತ;

ಉ. ನಾವೀನ್ಯತೆಯ ಪರವಾದ ಒಲವು;

ಊ. ಹಿಂದುಳಿದಿರುವಿಕೆಯ ಹಿಂದಿರುವ ನಿಜವಾದ ಕಾರಣಗಳನ್ನು ಯಾವಾಗಲೂ ಗುರುತಿಸಲಿಲ್ಲ, ಮತ್ತು

ಋ. ಸಂದೇಶದ ಒಮ್ಮುಖವಾದ ಹರಿಯುವಿಕೆ.

## 2.4 ಯಾಂತ್ರಿಕ ಮಾದರಿ

ಅಭಿವೃದ್ಧಿ ಕುರಿತಾದ ಸಹಭಾಗಿತ್ವ ರೀತಿಯ ಪ್ರತಿಪಾದಕನಾದ ಜಾನ್‌ಸೆರೇವಾಸ್, ಅಭಿವೃದ್ಧಿಗೆ ಇರುವ ಕಾರ್ಯತಂತ್ರಗಳ ಎರಡು ಸೂತ್ರಗಳನ್ನು ಗುರುತಿಸಿ ಅವುಗಳ ಹೋಲಿಕೆ ಮಾಡಿದ್ದಾನೆ. ಅದರಂತೆ, ಮೊದಲನೆಯದು ಯಾಂತ್ರಿಕ ಮಾದರಿ. ಜನಗಳಿಗೆ ಅವಶ್ಯವಾದ ಸಾಮರ್ಥ್ಯವಾಗಲೀ, ಸಂಪನ್ಮೂಲಗಳಾಗಲೀ ಇರುವುದಿಲ್ಲವಾದ ಕಾರಣ ಅವರು ತಾವೇ ತಾವಾಗಿ ಅಭಿವೃದ್ಧಿ ಸಾಧಿಸಲಾಗುವುದಿಲ್ಲ; ಅವರಿಗೆ ನೆರವಿನ ಅವಶ್ಯಕತೆ ಇರುತ್ತದೆ ಎಂದು ಈ ಮಾದರಿ ಪರಿಗಣಿಸುತ್ತದೆ. ಇದನ್ನು ಸಮಸ್ಯಾ-ಪರಿಹಾರ ಮಾದರಿ ಎಂದೂ ಕರೆಯಲಾಗುತ್ತದೆ. ಅದರಂತೆ ಕಾರ್ಯತಂತ್ರ ನಿಯೋಜಕನಿಗೆ ಎಲ್ಲಾ ರೀತಿಯ ತಿಳುವಳಿಕೆಯೂ ಇದ್ದು ಅದನ್ನು ಪಡೆಯುವ ವರ್ಗಕ್ಕೆ ಯಾವ ಜ್ಞಾನವೂ ಇರುವುದಿಲ್ಲ. ಪಾಶ್ಚಿಮಾತ್ಯರು ಒದಗಿಸುವವರಾದ್ದರಿಂದ, ಅವರ ಜ್ಞಾನವು ಅತ್ಯುನ್ನತ ಎಂದು ವಿವರಿಸಲಾಗಿದೆ. ಕಾರ್ಯತಂತ್ರಗಳ ನಿಯೋಜಕ ಅಥವಾ ಸಂಶೋಧಕನೇ ಇಲ್ಲಿ ಪರಿವರ್ತನೆಯ ಹರಿಕಾರ. ಅವರಿಗೆ ಜನರೆಂದರೆ ಕೇವಲ 'ಗುರಿ'ಗಳಷ್ಟೇ. ಉನ್ನತ ಅಧಿಕಾರವರ್ಗದವರಿಂದ ಧುರೀಣರು ಯೋಜಿಸಲ್ಪಡುತ್ತಾರೆ ಹಾಗೂ ಸಮೂಹ ಮಾಧ್ಯಮಗಳು ಅಭಿವೃದ್ಧಿಯ ಸಂದೇಶಗಳನ್ನು ಸಾರುತ್ತವೆ. ಸಂವಹನ ಪ್ರಕ್ರಿಯೆಯು ಮೇಲಿನಿಂದ ಕೆಳಗೆ ಹರಿಯುವ ಏಕಮುಖಿ ಪ್ರವಹನ. ಇಡೀ ಪ್ರಕ್ರಿಯೆಯು ಅಲ್ಪಾವಧಿಯದಾಗಿರುವಂತೆ ವಿನ್ಯಾಸವನ್ನು ಹೊಂದಿರುತ್ತದೆ ಮತ್ತು ಸಮಾಜದ ಬದಲಾವಣೆ ವಿಕಾಸವಾದದ ರೀತಿ ಆಗುವಂತೆ ಬಯಸುತ್ತದೆ.

## 2.5 ಸಾವಯುವ ಮಾದರಿ

ಯಾಂತ್ರಿಕ ಮಾದರಿಯ ಮತ್ತೊಂದು ವಿರುದ್ಧ ದಿಕ್ಕಿನ ಮಾದರಿ ಎಂದರೆ ಸಾವಯುವ ಮಾದರಿ. ಯಾಂತ್ರಿಕ ಮಾದರಿಯೊಂದಿಗೆ ಹೋಲಿಸಿದರೆ ಈ ಮಾದರಿ ತೀರ ಭಿನ್ನವಾದುದು. ಸಾವಯುವ ಮಾದರಿಯ ಪ್ರಕಾರ ಜನರು ಅನುಕಂಪ, ಔದಾರ್ಯಗಳನ್ನೇನೂ ಬೇಡುವುದಿಲ್ಲ. ತಮಗೆ ತಾವೇ ನೆರವು ನೀಡಿಕೊಳ್ಳಲು ಅವರು ಸ್ವಸಮರ್ಥರು. ತಮಗೆ ತಾವೇ ಸಹಾಯ ಮಾಡಿಕೊಳ್ಳುವಂತಹ ಈ ಪ್ರಕ್ರಿಯೆಯನ್ನು 'ಸಬಲೀಕರಣ' ಎಂದು ಕರೆಯಲಾಗುತ್ತದೆ.

ಇಲ್ಲಿಯ ಮನೋವೃತ್ತಿ ಸಮಸ್ಯೆಯ ಪರಿಹಾರವಲ್ಲ; ಬದಲಿಗೆ, ಸಮಸ್ಯೆಗಳನ್ನು ಯೋಜಿಸುವುದು. ಅಭಿವೃದ್ಧಿಯ ಕೊನೆಯಿಲ್ಲದ ಪ್ರಕ್ರಿಯೆಯಲ್ಲಿ ಜನರ ಸಹಭಾಗಿತ್ವವನ್ನು ಈ ಮಾದರಿಯು ಪರ್ಯಾಲೋಚಿಸುತ್ತದೆ. ಅವರೆಲ್ಲರೂ ಪರಸ್ಪರ ಜ್ಞಾನವನ್ನು ಹಂಚಿಕೊಳ್ಳುತ್ತಾರೆ. ಏಕೆಂದರೆ, ನೀಡಲು ಪ್ರತಿಯೊಬ್ಬರಲ್ಲೂ ಏನಾದರು ವಸ್ತು ವಿಷಯಗಳು ಇರುತ್ತವೆ. ವಿವೇಚನಾ ಜ್ಞಾನವನ್ನು ಉಪಯೋಗವಾದದ್ದೆಂದೂ, ವೈಚಿತ್ರ್ಯಪೂರ್ಣವೆಂದೂ ಪರಿಗಣಿಸಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ಜನಗಳೇ ಬದಲಾವಣೆಯ ಕಾರ್ಯಕರ್ತರು, ಅವರುಗಳೇ ಜಾಗೃತರು, ಅವರೇ ಪಾತ್ರಧಾರಿಗಳು, ನಾಯಕರ ಆಯ್ಕೆಯನ್ನು ಜನರೇ ಮಾಡುತ್ತಾರೆ. ಸಹಕಾರ, ನಿಯೋಜನೆ ಮತ್ತು ಹೊಂದಾಣಿಕೆ ಈ ಗುಣಗಳು ನಾಯಕತ್ವಕ್ಕೆ ಬೇಕಾದ ಅರ್ಹತೆಗಳೆಂದು ಶ್ರೀನಿವಾಸ್ ಮೇಲುಕೋಟೆಯವರು ಪಟ್ಟಿಮಾಡಿದ್ದಾರೆ. ಮಾಧ್ಯಮಗಳ ಸಮಗ್ರ ಉಪಯೋಗ ಮತ್ತು ದ್ವಿಮುಖೀಯವಾದ ಸಂವಹನಕ್ಕೆ ಸಾವಯವ ಮಾದರಿಯು ಹೆಚ್ಚು ಒತ್ತು ನೀಡಿತ್ತು.

ಯಾಂತ್ರಿಕ ಮಾದರಿಯು ತಾರತಮ್ಯ ಕ್ರಮದ, ಲಂಬರೀತಿಯ ಸಂಸ್ಥಾ ಸ್ವರೂಪವನ್ನು ಆಯ್ಕೆ ಮಾಡಿಕೊಂಡರೆ, ಸಾವಯುವ ಮಾದರಿಯ ಒಂದು ದ್ವಿ-ಸಮತಲದ ಸ್ವರೂಪವನ್ನು ಆರಿಸಿಕೊಂಡಿದೆ. ಹೀಗಾಗಿ, ಜನಗಳ ಮಾತನ್ನು ಕೇಳುವುದನ್ನೂ, ಎರಡೂ ದಿಕ್ಕುಗಳಲ್ಲಿ ಮಾಹಿತಿಯ ಪ್ರಸರಣವನ್ನೂ ಇದು ಸಾಧ್ಯವಾಗಿಸಿತು. ಯೋಜನೆಯ ದೀರ್ಘಾವಧಿಯದಾಗಿದ್ದು, ನಿರ್ದಿಷ್ಟ ಕಾಲ ಮಿತಿ ಇಲ್ಲದ್ದೂ ಆಗಿ, ಭಾಗವಹಿಸುವ ಮಂದಿಯೇ ಇದರ ಮೌಲ್ಯಮಾಪನ ಮಾಡುತ್ತಾರೆ. ಸಾವಯವ ಮಾದರಿಯು ಅಭಿವೃದ್ಧಿಗೆ ಕಾರಣವಾದ, ಅಂಶಗಳನ್ನು ಹೋಗಲಾಡಿಸುವ ಹಾಗೂ ಸಮಾಜದಲ್ಲಿ ಸ್ವರೂಪಾತ್ಮಕ ಬದಲಾವಣೆಗಳನ್ನು ಮಾಡುವ ಉದ್ದೇಶ ಹೊಂದಿದೆ.

ಆದರೆ, ಸಹಭಾಗಿತ್ವದ ಅರ್ಥ ಬೇರೆ ಬೇರೆ ಜನರಿಗೆ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಸಹಭಾಗಿತ್ವದ ಮಾದರಿ ಎಂದು ಕರೆಯಲ್ಪಡುವ ಸಾವಯವ ಮಾದರಿಗೆ ತನ್ನದೇ ಆದ ಕೆಲವೊಂದು ಸಮಸ್ಯೆಗಳಿವೆ. ಅವುಗಳೆಂದರೆ:

ಅ. ಸಂಬಂಧಿಸಿದ ದೇಶದಲ್ಲಿ ಇರುವ ಅಸ್ಥಿರವಾದ, ಅಸಂವೇದಿಯಾದ ರಾಜಕೀಯ ಸ್ಥಿತಿ;

ಆ. ಪ್ರಜಾಸತ್ತಾತ್ಮಕ ಸಹಭಾಗಿತ್ವವನ್ನು ಪ್ರೋತ್ಸಾಹಿಸದ ಅಧಿಕಾರಶಾಹಿ ಹಾಗೂ ಸರ್ವಾಧಿಕಾರಿ ಪದ್ಧತಿ;

ಇ. ಸ್ಥಳೀಯ ನಾಯಕತ್ವ ಮತ್ತು ಸಂಸ್ಥೆಗಳ ಕೊರತೆ;

ಈ. ಕೆಲವೇ ಮಂದಿಯಿಂದ ಉತ್ಪಾದನೆಯ ನಿಯಂತ್ರಣ;

ಉ. ಶೋಷಿತ ವರ್ಗದವರ ಬಗ್ಗೆ ಸಂಪೂರ್ಣ ಅನಾದರ;

ಊ. ಲಿಂಗ ತಾರತಮ್ಯ;

ಋ. ಆಸಕ್ತಿ ಇಲ್ಲದ ಸರ್ಕಾರ;

ಎ. ಆರ್ಥಿಕ ಕೊರತೆ, ಮತ್ತು

ಏ. ಬುಡಮಟ್ಟದಲ್ಲಿ ಜನರ ಸಹಭಾಗಿತ್ವಕ್ಕೆ ಅಡ್ಡಿಯಾಗುವ ಮೂಲಸೌಕರ್ಯಗಳ ಕೊರತೆ.

ಸಹಭಾಗಿತ್ವದ ಈ ಮಾದರಿ ಆಸಕ್ತಿ ಮೂಡಿಸುವಂತಹುದೂ, ವೈಚಿತ್ರ್ಯಪೂರ್ಣವೂ ಎಂದೆನಿಸುತ್ತದೆ. ಹಲವಾರು ಅಂಶಗಳು ಇದರ ಸಕ್ಷಮತೆಯ ಮೇಲೆ ಪ್ರಭಾವ ಬೀರುತ್ತವೆ.

ಜ್ಞಾನವನ್ನು ಹಂಚಿಕೊಳ್ಳುವ ಮಾದರಿ ಎಂದು ಕರೆಯಲಾಗುವ ಅಭಿವೃದ್ಧಿ ಸಂಪರ್ಕ ಮಾದರಿಯನ್ನು ಆಶ್‌ಕ್ರಾಫ್ಟ್ ಮತ್ತಿತರ ಚಿಂತಕರು ಸೂಚಿಸಿದ್ದಾರೆ. ಇದು ಸಹ-ಸಮಾನತೆಯ ಆಧಾರದ ಮೇಲೆ ಆಗಬೇಕಾದದ್ದು. ಕೊಡುವವನೂ ಮತ್ತು ಪಡೆಯುವವನೂ ಇಬ್ಬರೂ ತಮ್ಮ ಅರಿವನ್ನು ಹಂಚಿಕೊಳ್ಳುವುದರಿಂದ ಪರಸ್ಪರ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳು ಸಮಾನವಾಗಿಯೇ ಇರುತ್ತವೆ ಎಂಬುದು ವಿಶೇಷಜ್ಞರ ವಾದ. ಇದನ್ನು ಪುಷ್ಟೀಕರಿಸಲು ನಾಯರ್ ಮತ್ತು ವೈಟ್ ವ್ಯವಹಾರಾತ್ಮಕ ಸಂಪರ್ಕ ಮಾದರಿಯನ್ನು ರೂಪಿಸಿದರು. ಈ ಮಾದರಿಯು ಚಟುವಟಿಕೆ, ಸೃಜನಾತ್ಮಕತೆ ಮತ್ತು ನಿರಂತರತೆ ಎಂಬ ಮೂರು ಹಂತದ ಸಹಭಾಗಿತ್ವವನ್ನು ಗುರುತಿಸಿತು. ಅಲ್ಪ ಸಹಭಾಗಿತ್ವದ ಗಮನ ಕೇಂದ್ರೀಕರಣ ಅಷ್ಟಾಗಿ ಆಗಿರಲಿಲ್ಲ ಮತ್ತು ದ್ವಿಮುಖವಾದ ಸಂವಹನಕ್ಕೂ ಅದು ಹೆಚ್ಚಿನ ಪ್ರಾತಿನಿಧ್ಯ ನೀಡಲಿಲ್ಲ. ಅಲ್ಪ ಸಹಭಾಗಿತ್ವವು ಬದಲಾವಣೆಯ ಅವಶ್ಯಕತೆಗಾಗಲೀ, ಸಂವಹನಕ್ಕಾಗಲೀ ಹೆಚ್ಚಿನ ಮಹತ್ವ ನೀಡಲಿಲ್ಲ.

## 2.6 ಅಭಿವೃದ್ಧಿಯ ಬೆಂಬಲ ಸಂವಹನ

'ಅಭಿವೃದ್ಧಿ ಸಂವಹನ' ಈ ಬಗ್ಗೆ, ಮೊದಲಿಗೆ ಹೆಚ್ಚಿನ ಗಮನ ಕೇಂದ್ರೀಕೃತವಾಗಿತ್ತು. ದೊಡ್ಡ ಮಾಧ್ಯಮಗಳ ಮತ್ತು ಸರ್ಕಾರ-ಜನತೆಯ ಸಂವಹನಕ್ಕೆ ಇದು ಹೆಚ್ಚಿನ ಮಹತ್ವ ನೀಡಿತು. ಆದರೆ, ವಿಶದವಾಗಿ ಮೌಲ್ಯಮಾಪನ ಮಾಡಿದ ನಂತರ 'ಅಭಿವೃದ್ಧಿ ಬೆಂಬಲ ಸಂವಹನ' ಎಂಬ ಮೂಲ ಕಲ್ಪನೆ ಮೂಡಿಬಂದಿತು. ಅಭಿವೃದ್ಧಿ ಬೆಂಬಲದ ಪತ್ರಕರ್ತ, ತಾಂತ್ರಿಕ ತಜ್ಞರು ಮತ್ತು ಜನತೆಯ ನಡುವಿನ ಕೊಂಡಿಯಾಗಿದ್ದನು. ಇವರಿಬ್ಬರನ್ನೂ ಒಟ್ಟಿಗೆ ತಂದು, ಸಹ ಸಮಾನ ಪಾಲುದಾರರನ್ನಾಗಿಸಿ ವಿಚಾರ ವಿನಿಮಯ ಮಾಡಿಸುವುದು ಅವನ ಕರ್ತವ್ಯವಾಗಿತ್ತು. 'ಅಭಿವೃದ್ಧಿ ಸಂವಹನ'ದಲ್ಲಿ ಸಮಾನವಾದ ಸಂಪರ್ಕ ಭಾಷೆಯೇ ಇಲ್ಲವಾಗಿತ್ತು. ಅಭಿವೃದ್ಧಿಯ ಯೋಜನೆಗಳ ಅಧ್ಯಯನ ನಿರತರು ಮತ್ತು ಫಲಾನುಭವಿಗಳು ಈ ತೊಂದರೆಯನ್ನು ಹೋಗಲಾಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅಭಿವೃದ್ಧಿ ಬೆಂಬಲ ಸಂವಹನದ ಕೆಲವೊಂದು ಗುಣಲಕ್ಷಣಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ಅ. ಮೂಲತಃ ಇದು ಅಭಿವೃದ್ಧಿಯ ಸಂಘಟನೆಯನ್ನು ಆಧರಿಸಿದೆ.

ಆ. ವಿಶೇಷಜ್ಞರು ಮತ್ತು ಗ್ರಾಹಕರ ನಡುವೆ ಸಮಸ್ತರ ಜ್ಞಾನದ ಹಂಚಿಕೆಯಾಗುವ ವ್ಯವಸ್ಥೆ ಇದರಲ್ಲಿದೆ.

ಇ. ಮೂಲಮಟ್ಟದ ಬೆಳವಣಿಗೆಯೆಡೆಗೆ ಇದರ ಲಕ್ಷ್ಯವಿರುತ್ತದೆ.

ಈ. ಸಹಭಾಗಿತ್ವ ವಿಧಾನದ ಮೇಲೆ ಇದು ಗಮನ ಕೇಂದ್ರೀಕರಿಸುತ್ತದೆ, ಮತ್ತು

ಉ. ಸಣ್ಣ ಮಾಧ್ಯಮಗಳಾದ ವೀಡಿಯೋ, ಚಿತ್ರದ ತುಣುಕುಗಳು, ಸಾಂಪ್ರದಾಯಿಕ ರೂಪಗಳು, ಗುಂಪು ಹಾಗೂ ವ್ಯಕ್ತಿಗಳ ನಡುವಿನ ವಿಚಾರ ವಿನಿಮಯ ಇವುಗಳೆಲ್ಲವನ್ನೂ ಸಂವಹನಕ್ಕೆ ಬಳಸಲಾಗುತ್ತದೆ.

ಅಭಿವೃದ್ಧಿ ಬೆಂಬಲ ಸಂವಹನದ ಅಂತಿಮ ಉದ್ದೇಶವೆಂದರೆ, ಉಪಕಾರ ಮಾಡುವ ದಾನಿ ಮತ್ತು ಫಲಾನುಭವಿಗಳ ನಡುವೆ ಪರಸ್ಪರರಲ್ಲಿ ದೀರ್ಘಕಾಲಿಕವಾದ ನಂಬಿಕೆಯನ್ನು ಹುಟ್ಟಿಸುವುದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪೂರ್ವಸನ್ನದ್ಧತೆಯ ಪಾತ್ರವನ್ನು ಇದು ಸಾಮಾನ್ಯ ಜನತೆಗೆ ನೀಡುತ್ತದೆ.

## 2.7 ಗಾಂಧೀಜಿಯವರ ಮಾದರಿ

ಬ್ರಿಟಿಷರ ಆಳ್ವಿಕೆಯಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಅಹಿಂಸೆಯ ಅವಧೂತ ಮಹಾತ್ಮಾ ಗಾಂಧಿ, ಅಭಿವೃದ್ಧಿ ಕುರಿತು ತಮ್ಮದೇ ಆದ ಕಲ್ಪನೆಯನ್ನು ಹೊಂದಿದ್ದರು. ಹಳ್ಳಿಗಳ ದೇಶದಲ್ಲಿರುವ ಜನತೆಯ ಅವಶ್ಯಕತೆ, ಆಶೋತ್ತರಗಳನ್ನು ಮಹಾತ್ಮಾಗಾಂಧೀಜಿಯವರು ಸಮಗ್ರವಾಗಿ ಅರಿತಿದ್ದರು. ಅಭಿವೃದ್ಧಿಗೆ ಬೇಕಾದ ಪೂರ್ಣಾನುಸಂಧಾನವನ್ನು ಗಾಂಧೀಜಿಯವರು ಹೊಂದಿದ್ದರು. ನೈತಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಆರ್ಥಿಕ ಧ್ಯೇಯಗಳೊಂದಿಗೆ ಅವರು ಸಂಯೋಜನೆ ಮಾಡಿದ್ದು, ವ್ಯಕ್ತಿಯ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅವರು ನೀಡಿದ ಗಮನಾರ್ಹ ಕಾಣಿಕೆ.

**ಗಾಂಧೀಜಿಯವರ ಮಾದರಿಯು ಈ ಕೆಳಕಂಡ ಮೂಲನಂಬಿಕೆಗಳನ್ನು ಆಧರಿಸಿತ್ತು:**

ಅ. ಕೇವಲ ಹಳ್ಳಿಗಳಲ್ಲಿ ಮಾತ್ರ ನಿಜವಾದ ಭಾರತವನ್ನು ಕಾಣಬಹುದೇ ಹೊರತು ನಗರ ಅಥವಾ ಪಟ್ಟಣಗಳಲ್ಲ.

ಆ. ಗ್ರಾಮಗಳ ಮತ್ತು ಗ್ರಾಮಸ್ಥರ ಮೇಲೆ ಪಟ್ಟಣಗಳಿಂದ ಆಗುತ್ತಿರುವ ಶೋಷಣೆ ನಿಲ್ಲಬೇಕು.

ಇ. ಜನತೆಯ ಕನಿಷ್ಠ ಅಥವಾ ಮೂಲಭೂತ ಅವಶ್ಯಕತೆಗಳು ಮೊದಲಿಗೆ ಪೂರ್ಣವಾಗಬೇಕು.

ಈ. ದೈಹಿಕ ಶ್ರಮದ ಕೆಲಸ ಪ್ರತಿಯೊಬ್ಬರಿಗೂ ಕಡ್ಡಾಯವಾಗಬೇಕು ಮತ್ತು ಅಂತಹ ಕೆಲಸದಿಂದಲೇ ಅವರು ಜೀವನಾವಶ್ಯವಾದ್ದನ್ನು ಸಂಪಾದಿಸಬೇಕು. ಆಗಲೇ ಪ್ರತಿಯೊಬ್ಬರೂ ಕರ್ತವ್ಯದ ನಿಜವಾದ ಗೌರವವನ್ನು ಅರ್ಥಮಾಡಿಕೊಳ್ಳುವುದು.

ಉ. ಜನರು ದೇಶದಲ್ಲೇ ತಯಾರಾದ (ಸ್ವದೇಶೀ) ಸಾಮಗ್ರಿಗಳು ಮತ್ತು ಸಂಸ್ಥೆಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು,

ಗುರಿ ಮತ್ತು ಸಾಧನೆಯ ಮಾರ್ಗಗಳಲ್ಲಿ ಧರ್ಮದ ಸಮತೋಲನವನ್ನು ಗಾಂಧೀಜಿಯವರು ಬಹುವಾಗಿ ಒತ್ತಿಹೇಳಿದರು. ಅಹಿಂಸೆಯ ಗೆಲುವಿಗೆ ಇದು ಅತ್ಯವಶ್ಯವಾಗಿತ್ತು. ಹಳ್ಳಿಯ ಆರ್ಥಿಕತೆಯು ಕೇವಲ ಹಳ್ಳಿಗಳಿಗಷ್ಟೇ ಸೀಮಿತವಾಗದೆ ಸಮಗ್ರವಾಗಿ ದೇಶದ ಸ್ವಾವಲಂಬನೆಗೆ ಮುಖ್ಯ ಎನ್ನುವುದನ್ನು ಗಾಂಧೀಜಿಯವರ ಮಾದರಿಯು ಒತ್ತಿಹೇಳಿತು. ಅವಶ್ಯಕತೆ ಉಂಟಾದಾಗ, ಹಳ್ಳಿಗರು ತಾವು ಉತ್ಪಾದನೆ ಮಾಡದ ವಸ್ತುಗಳನ್ನು ಪಡೆದುಕೊಳ್ಳಬಹುದಿತ್ತು ಅಥವಾ ಕೊಳ್ಳಬಹುದಿತ್ತು. ದಿನೋಪಯೋಗಿ ವಸ್ತುಗಳನ್ನು ಉತ್ಪಾದಿಸುವ ಮತ್ತು ಎಲ್ಲರಿಗೂ ಉದ್ಯೋಗವನ್ನು ಒದಗಿಸುವ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ಸಾಬೂನು, ಕಾಗದ ಮತ್ತು ಲೋಹಗಳ ಉತ್ಪಾದನೆ, ಕೈಯಿಂದ ಕುಟ್ಟುವುದು, ಎಣ್ಣೆ ಕಾಳುಗಳನ್ನು ಅರೆಯುವುದು ಮತ್ತು ಅಂಥಹುದೇ ಇತರ ಕ್ರಿಯೆಗಳಿಗೆ, ಅವು ಕೈಕೆಲಸಕ್ಕೆ ಹೆಚ್ಚು ಅವಕಾಶ ನೀಡುವ ಕಾರಣದಿಂದ ಪ್ರಾಧಾನ್ಯತೆಯನ್ನು ಕಲ್ಪಿಸಲಾಗಿತ್ತು. ಯಂತ್ರಗಳು ಮಾನವ ಸಂಪನ್ಮೂಲವನ್ನು ಅನವಶ್ಯವನ್ನಾಗಿ ಮಾಡುವುದೆಂಬ ಆಲೋಚನೆಯನ್ನು ಅವರು ಹೊಂದಿದ್ದರೂ, ಉದ್ಯೋಗವನ್ನು ಸೃಷ್ಟಿಸುವ ಅಥವಾ ಉದ್ಯೋಗಗಳಿಗೆ ಕುತ್ತು ತಾರದ ತಂತ್ರಜ್ಞಾನಗಳನ್ನು ಅವರು ಒಪ್ಪಿಕೊಳ್ಳುತ್ತಿದ್ದರು.

ಆರ್ಥಿಕ ಮತ್ತು ರಾಜಕೀಯ ತತ್ವಗಳಲ್ಲಿ ಅತ್ಯುತ್ತಮವಾದ ಸೂತ್ರವೆಂದರೆ ಆರ್ಥಿಕ ಶಕ್ತಿಗಳ ವಿಕೇಂದ್ರೀಕರಣ. ಪಂಚಾಯತ್‌ರಾಜ್ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಇದನ್ನು ಸಾಧಿಸಬಹುದೆಂಬುದು ಅವರ ಅಭಿಪ್ರಾಯವಾಗಿತ್ತು.

ಪ್ರತಿಯೊಂದು ಹಳ್ಳಿಯೂ ತನ್ನ ಆರ್ಥಿಕತೆಯನ್ನು ನಿರ್ವಹಿಸುವುದಕ್ಕೋಸ್ಕರ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗದ ಎಲ್ಲಾ ಅಧಿಕಾರಿಗಳನ್ನೂ ಹೊಂದಿದ್ದು, ತನ್ನ ಎಲ್ಲಾ ಕಾರ್ಯಚಟುವಟಿಕೆಗಳನ್ನೂ ನಿರ್ವಹಿಸಲು ಸಾಧ್ಯವಾಗುವಂತಿರಬೇಕು. ಪ್ರತಿಯೊಂದು ಗ್ರಾಮವೂ ಆರೋಗ್ಯ, ನೈರ್ಮಲ್ಯ ಮತ್ತು ಶಿಕ್ಷಣ ಇವುಗಳೆಲ್ಲವನ್ನೂ ನೋಡಿಕೊಳ್ಳುವಂತಿದ್ದು, ಒಂದು ಗಣರಾಜ್ಯದಂತೆ ಕಾರ್ಯ ನಿರ್ವಹಿಸಬೇಕು ಎಂಬುದು ಗಾಂಧೀಜಿಯವರ ಅಭಿವೃದ್ಧಿ ಮಾದರಿಯ ಮೂಲ ತಂತ್ರವಾಗಿತ್ತು.

1992ರ 73ನೇಯ ಸಂವಿಧಾನ ತಿದ್ದುಪಡಿ ವಿಧೇಯಕವು ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ದೇಶದೆಲ್ಲೆಡೆ ಸ್ವಯಂ ಆಡಳಿತ ವ್ಯವಸ್ಥೆಯನ್ನು ಯೋಜಿಸಿತು. ಗ್ರಾಮೀಣ ಭಾರತದ ಅಭಿವೃದ್ಧಿಗೆ ಸಹಕಾರಿ ಪದ್ಧತಿಯು ಕಾರಣವಾಗುವುದೆಂಬ ನಂಬಿಕೆ ಗಾಂಧೀಜಿಯವರದಾಗಿತ್ತು. ಸಹಕಾರಿ ಕೃಷಿಯನ್ನೂ ಕೂಡ ಅವರು ಶಿಫಾರಸ್ಸು ಮಾಡುತ್ತಿದ್ದರು. ಸಹಕಾರಿ ಸಂಘಸಂಸ್ಥೆಗಳು, ನೇಕಾರರ ಹಾಗೂ ಹಾಲು ಉತ್ಪಾದಕರ ಮತ್ತು ಮಾರಾಟಗಾರರ ಸಹಕಾರಿ ಸಂಘಗಳು, ಲೇವಾದೇವಿ ಮಾಡುವ ಸಾಹುಕಾರರ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿ ಗ್ರಾಮೀಣ ಜನರಿಗೆ ನವಜೀವನ ನೀಡುವುದೆಂದು ಭಾವಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಭಾರತದಲ್ಲಿ ಇದ್ದರೂ, ಲೇವಾದೇವಿದಾರರು ನಿರಂತರವಾಗಿ ಗ್ರಾಮೀಣ ಜನತೆಯ ಶೋಷಣೆ ಮಾಡುತ್ತಾರೆ. ಮನುಷ್ಯ, ಮನುಷ್ಯನ ಮೇಲೆ ನಡೆಸುವ ಶೋಷಣೆಯನ್ನು ಧರ್ಮದರ್ಶಿತನವು ನಿಲ್ಲಿಸುತ್ತದೆ ಎಂದು ಗಾಂಧೀಜಿಯವರು ಭಾವಿಸಿದ್ದರು. ಭೂಮಿಯೂ ಸೇರಿದಂತೆ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳೂ ಸಾಮುದಾಯಿಕ ಒಡೆತನದಲ್ಲಿರಬೇಕೆಂದೂ, ಅದರಿಂದ ಸಂಪೂರ್ಣ ಸಮುದಾಯಕ್ಕೆ ಅನುಕೂಲವಾಗಬೇಕೆಂದು ಅವರು ಭಾವಿಸಿದ್ದರು. ಶ್ರೀಮಂತ ಜನರು ಸಮಾಜದಲ್ಲಿ ಧರ್ಮದರ್ಶಿಗಳಂತೆ ನಡೆದುಕೊಂಡು, ಬಡವರು ಸಾಂಘಿಕವಾಗಿ ಬೆಳೆಯಲು ಸಹಾಯ ಮಾಡುವ ಆಶಯ ಅವರದಾಗಿತ್ತು.

ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಮಹಾತ್ಮಗಾಂಧಿಯವರು ಒಪ್ಪುತ್ತಿರಲಿಲ್ಲ. ದಿನನಿತ್ಯದ ಜೀವನಕ್ಕೆ ಸಂಗತವಾದ ಶಿಕ್ಷಣವನ್ನು ಅವರು ಸಮರ್ಥಿಸುತ್ತಿದ್ದರೇ ಹೊರತು, ಕೇವಲ ಮಾಹಿತಿಯ ಸಂಗ್ರಹಣೆಯನ್ನಲ್ಲ. ಅವರ ಪ್ರಕಾರ, ಶಿಕ್ಷಣ ವ್ಯವಸ್ಥೆಯು ಯುವ ಮನಸ್ಸುಗಳ ಸಂಪೂರ್ಣ ಸಾಮರ್ಥ್ಯವನ್ನು ಮತ್ತು ಕೌಶಲ್ಯಗಳನ್ನು ಅರಳಿಸುವಂತಿರಬೇಕು. ಸ್ವಾವಲಂಬನೆ ಮತ್ತು ಉನ್ನತ ನೈತಿಕತೆಯೆಡೆಗೆ ಲಕ್ಷ್ಯವಿಟ್ಟ ಕಾರ್ಯಶೀಲವಾದ ಶಿಕ್ಷಣ ಅವರದ್ದಾಗಿತ್ತು. ಇದನ್ನು ಅವರು 'ನಯೀ ತಾಲೀಮ್' (ಹೊಸ ಶಿಕ್ಷಣ) ಎಂದು ಕರೆದರು. ಗಾಂಧೀಜಿಯವರ ಆರ್ಥಿಕ ತತ್ವಾದರ್ಶಗಳ ಮೂಲ ಆಧಾರ "ಜನರಾಶಿಯಿಂದ ಉತ್ಪಾದನೆ, ಉತ್ಪಾದನೆಯ ರಾಶಿಯಲ್ಲ," ಎಂಬುದಾಗಿತ್ತು.

ಗಾಂಧೀಜಿಯವರ ಮಾದರಿಯನ್ನು ಹೊಗಳುವವರೂ, ತೆಗಳುವವರೂ ಇದ್ದಾರೆ. ಮೊದಲನೆ ಮಹಾಯುದ್ಧದ ನಂತರ, ವಿಶ್ವವು ಹೆಚ್ಚು ಹೆಚ್ಚಾಗಿ ತಂತ್ರಜ್ಞಾನ ಅಭಿಮುಖಿಯಾಗಿರುವುದರಿಂದ, ಈ ಮಾದರಿ ಹಳತಾಗಿದೆ, ಅಪ್ರಸ್ತುತವಾಗಿದೆ ಎಂಬುದು ಕೆಲವು ಜನರ ಅಭಿಪ್ರಾಯ. ತಂತ್ರಜ್ಞಾನಗಳನ್ನು ಹೊಂದಿದ್ದ ದೇಶಗಳು ಕೇವಲ ಸಂಪನ್ಮೂಲಗಳನ್ನು ಹೊಂದಿದ್ದ ದೇಶಗಳ ಮೇಲೆ ಪ್ರಭುತ್ವ ಪಡೆದು ಅವುಗಳನ್ನು ಕೊನೆಯಿಲ್ಲದಂತೆ ಶೋಷಿಸಿದವು. ಗಾಂಧೀಜಿಯವರ ಮಾದರಿಯನ್ನು ಅನುಸರಿಸಿದರೆ, ತಂತ್ರಜ್ಞಾನದ ಅಂತರ ಹೆಚ್ಚುತ್ತಲೇ ಹೋಗುವುದೆಂದೂ, ಶ್ರೀಮಂತ ರಾಷ್ಟ್ರಗಳು ಬಡದೇಶಗಳನ್ನು ಕೊಳ್ಳೆ ಹೊಡೆಯುವುದು ಮುಂದುವರೆಸುತ್ತಲೇ ಹೋಗುವುದೆಂದು ಅವರ ವಾದ. ಈ ಚರ್ಚೆ ಮುಂದುವರೆಯುತ್ತಲೇ ಇದೆ.

## 2.8 ಸಾರಾಂಶ

ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಮುಖ ವಿಚಾರ 'ಅಭಿವೃದ್ಧಿ' ಎಂಬುದೇ ಆಗಿದೆ. ತಮ್ಮ ಸಮಾಜಗಳ ಅಭಿವೃದ್ಧಿಗೆ ಪ್ರಪಂಚದಾದ್ಯಂತ ಸರ್ಕಾರಗಳು ತಮ್ಮದೇ ಆದ ಕಾರ್ಯನೀತಿಗಳನ್ನೂ, ಕಾರ್ಯಯೋಜನೆಗಳನ್ನೂ ರೂಪಿಸಿಕೊಳ್ಳುತ್ತಿವೆ. ಅಭಿವೃದ್ಧಿಯನ್ನು ಶೀಘ್ರವಾಗಿ ಸಾಧಿಸಬೇಕು ಎನ್ನುವ ಹಂಬಲ ಹೊಂದಿದ ಈ ದೇಶಗಳಿಗೆ ಪಾಶ್ಚಾತ್ಯ ದೇಶಗಳು ಕೈಗಾರಿಕೀಕರಣದ ಮಾದರಿಯನ್ನು ಸೂಚಿಸಿದವು. ಅವರ ಮಾದರಿಯನ್ನು 'ಪ್ರಬಲ ಸ್ವರಗಳು' ಎಂದೂ ಕರೆಯಲಾಗುತ್ತದೆ. ಐದು ಹಂತಗಳ ಅಭಿವೃದ್ಧಿಯ ತಮ್ಮ ಮಾದರಿಯನ್ನು ವಾಲ್ಟ್ ರೋಸ್ಟೋವ್ ನೀಡಿದರು. ಇದು ಮೇಲಿನಿಂದ ಕೆಳಗೆ ಸಾಗುವ ಲಂಬರೂಪದ ಪ್ರಕ್ರಿಯೆಯಾಗಿತ್ತು. ಹೆಚ್ಚು ಹೆಚ್ಚು ಪ್ರಮಾಣದ ಉಪಭೋಗದಿಂದ ಅಭಿವೃದ್ಧಿ ಆಗುವುದೆಂದು ಅವರು ಸೂಚಿಸಿದರು. ಅದರ ಸಹಭಾಗಿತ್ವದ ಗುಣದಿಂದಾಗಿ ಈ ಮಾದರಿಯನ್ನು ಏಕಮುಖಿ ಮಾದರಿ ಎಂದೂ ಕರೆಯಲಾಗುತ್ತದೆ.

ಡೇನಿಯಲ್ ಲರ್ನರ್‌ನ ಮಾದರಿಯೂ ಇದೇ ರೀತಿಯದ್ದೇ. ಅಕ್ಷರತೆ, ನಗರೀಕರಣ, ರಾಜಕೀಯ ಸಹಭಾಗಿತ್ವ, ಭೌತಿಕ ಹಾಗೂ ಸಾಮಾಜಿಕ ಚಲನಶೀಲತೆ ಹಾಗೂ ಅನುಭಾವಗಳನ್ನು ಲರ್ನರ್ ಒತ್ತಿ ಹೇಳುತ್ತಾರೆ. ಸಮೂಹ ಮಾಧ್ಯಮಗಳನ್ನು ಮಯಾಗುಣಕಗಳೆಂದು ಕರೆದುದಲ್ಲದೆ, ಹೆಚ್ಚುತ್ತಿರುವ ಆಸಕ್ತಿಗಳ ಕ್ರಾಂತಿಯನ್ನೂ ಅವರು ಗುರುತಿಸಿದರು.

ಅಭಿವೃದ್ಧಿಯ ಸಂದೇಶಗಳನ್ನು ಪ್ರಸರಣ ಮಾಡುವುದಲ್ಲಿ ಸಮೂಹ ಮಾಧ್ಯಮಗಳಿಗೆ ಮಹತ್ತರವಾದ ಪಾತ್ರವನ್ನು ವಹಿಸಿಕೊಟ್ಟವರು ಇ.ಎಂ. ರೋಜರ್ಸ್ ಮತ್ತು ಡೇನಿಯಲ್ ಲರ್ನರ್ ಅವರು. ಹಲವಾರು ಸಂವಹನ ಸಾಧನಗಳ ಮೂಲಕ ಮಾಹಿತಿಯ ಪ್ರಸರಣವನ್ನು ಕೇಂದ್ರೀಕರಿಸುವ ಈ ಮಾದರಿಯ ಹೆಸರು ಪ್ರಸರಣ ಮಾದರಿ. ಅಭಿವೃದ್ಧಿಯ ಪ್ರಕ್ರಿಯೆಯನ್ನು ಮುಂದೆ ಜಾನ್ ಸೆರ್‌ವಾಸ್ ಯಾಂತ್ರಿಕ ಹಾಗೂ ಸಾವಯವ ಮಾದರಿಗಳೆಂದು ವರ್ಗೀಕರಿಸಿದರು. ಯಾಂತ್ರಿಕ ಮಾದರಿಯು ಏಕಮುಖಿ ಮಾದರಿಯ ಗುಣಲಕ್ಷಣಗಳನ್ನು ಪ್ರತಿಫಲಿಸಿದರೆ, ಸಾವಯವ ಮಾದರಿಯು ಜನಕೇಂದ್ರೀಯವಾಗಿತ್ತು.

ಅಭಿವೃದ್ಧಿ ಬೆಂಬಲ ಸಂವಹನವು ಸಮತಳೀಯವೂ, ದ್ವಿಮುಖೀಯವೂ ಆದ ಸಂವಹನಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತದೆ. ಗಾಂಧೀಜಿಯವರ ಮಾದರಿಯು ಅಹಿಂಸೆ ಮತ್ತು ಸತ್ಯ-ತತ್ವಗಳನ್ನು ಆಧರಿಸಿದೆ. ರಾಶಿ ಉತ್ಪಾದನೆಗಿಂತ ಜನರಾಶಿಯಿಂದಾಗುವ ಉತ್ಪಾದನೆಗೆ ಅದು ಹೆಚ್ಚಿನ ಒಲವನ್ನು ತೋರಿಸುತ್ತದೆ. ಮೂಲ ಅವಶ್ಯಕತೆಗಳನ್ನು ಶಿಕ್ಷಣ, ಧಾರ್ಮಿಕ ಮತ್ತು ನೈತಿಕ ಕ್ರಮ, ಧರ್ಮದರ್ಶಿತ್ವ ಮತ್ತು ಔಚಿತ್ಯಪೂರ್ಣವಾದ ತಂತ್ರಜ್ಞಾನ, ಇವು ಈ ಮಾದರಿಯ ಇತರ ಕೆಲವು ಪ್ರಮುಖ ಗುಣಲಕ್ಷಣಗಳು.

## 2.9 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ರೋಸ್ಟೋವ್‌ನ ಅಭಿವೃದ್ಧಿಯ ಆರ್ಥಿಕ ಮಾದರಿಯ ಐದು ಹಂತಗಳನ್ನು ಗುರುತಿಸಿ.
2. ಪ್ರಸರಣ ಮಾದರಿಯಲ್ಲಿ ತಿಳಿಸಿರುವ ಅಳವಡಿಕೆಯ ಐದು ಹಂತಗಳನ್ನು ಪಟ್ಟಿಮಾಡಿ.
3. ಅಭಿವೃದ್ಧಿಯ ಯಾಂತ್ರಿಕ ಹಾಗೂ ಸಾವಯವ ಮಾದರಿಗಳ ನಡುವಣ ವ್ಯತ್ಯಾಸವನ್ನು ಸ್ಥೂಲವಾಗಿ ವಿವರಿಸಿ.
4. ಗಾಂಧೀಜಿಯವರ 'ಅಭಿವೃದ್ಧಿ ಮಾದರಿ'ಯ ಗುಣಲಕ್ಷಣಗಳನ್ನು ಚರ್ಚಿಸಿ.

## 2.10 ಹೆಚ್ಚಿನ ಓದಿಗಾಗಿ


1. Chakravarthy, Journalism: Changing Society and Emerging Trends, Deep Publications- New Delhi, 2001.

2. Joshi, Understanding Developmental Communication, Deep Publications, New Delhi - 2001.

3. Mahadevan, Communication Modernisation and Social Development, B.R. Publishers - New Delhi, 2002.

4. Srinivas Melkote, Communication for the Development in the Third World, Sage Publications - New Delhi, 1991.

5. Srinivas Melkote, Communication Gap in the Process of Development, Rawat Publications - New Delhi, 1994.


ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ಪಿ. ಸತ್ಯೇಂದ್ರ ರಾವ್

## ಟಿಪ್ಪಣಿ